ಸಂಪಾದಕ:ಎಸ್.ಕೆ.ಒಡೆಯರ್ ಸ್ವಾಭಿಮಾನಿಗಳಪತ್ರಿಕೆ www.pavitrapraja.com

# ಪವಿತ್ರ ಪ್ರಜಾ

PAVITRAPRAJA Daily RNI:KARKAN: 2007/22780 ದಿನಪತ್ರಿಕೆ

e-mail:pavitrapraja@gmail.com KA/SK/CTA-806/21-23 Davanagere 9141920642

ಸಂಪುಟ:19 ಸಂಚಿಕೆ: 35 ದಿನಾಂಕ 03-06-2026 ಬುಧವಾರ ಪುಟ:4 ರೂ.2-00 ಉಪಸಂಪಾದಕರು: ಸುಪ್ರಿತ ಎಸ್. ಒಡೆಯರ್ ಎಂಬಿಎ Vol:19 Issuse:35 Date:03-06-2026 Wednesday page:4 Rs:2-00 SubEditor: Supritha Wadeyar

## ಡಿಕೆಶಿ ಪದಗ್ರಹಣಕ್ಕೆ ಭರದ ಸಿದ್ಧತೆ : ಫ್ಲೆಕ್ಸ್, ಬ್ಯಾನರ್‌ಗಳಿಂದ ರಾರಾಜಿಸುತ್ತಿದೆ ಬೆಂಗಳೂರು







ಬೆಂಗಳೂರು: ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವಿಕಾರ ಸಮಾರಂಭಕ್ಕೆ ಬೆಂಗಳೂರಿನಲ್ಲಿ ಭರ್ಜರಿ ಸಿದ್ಧತೆಗಳು ನಡೆದಿವೆ.ಲೋಕಭವನದಲ್ಲಿ ಸಂಜೆ 4.05ಕ್ಕೆ ಮುಖ್ಯಮಂತ್ರಿ ಹಾಗೂ ಸಂಪುಟದ ಸಚಿವರ ಪ್ರಮಾಣವಚನ ಸ್ವಿಕಾರ ಸಮಾರಂಭ ನಡೆಯಲಿದೆ. ಇದಕ್ಕಾಗಿ ನಗರದಾದ್ಯಂತ ಫ್ಲೆಕ್ಸ್, ಬ್ಯಾನರ್‌ಗಳು ರಾರಾಜಿಸುತ್ತಿವೆ.

ಲೋಕಭವನದ ಗಾಜಿನ ಮನೆಯಲ್ಲಿ ವೇದಿಕೆ ಸಜ್ಜುಗೊಂಡಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಂಸದೆ ಪ್ರಿಯಾಂಕ ಗಾಂಧಿ,

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸುವ ಸಾಧ್ಯತೆ ಇದೆ.

ಎಲ್ಲಾ ಧರ್ಮದ ಧಾರ್ಮಿಕ ಮುಖಂಡರನ್ನು ಪ್ರಮಾಣವಚನ ಸ್ವಿಕಾರ ಸಮಾರಂಭಕ್ಕೆ ಸಾಕ್ಷಿಕ-ರಿಸುವಂತೆ ಆಹ್ವಾನಿಸಲಾಗಿದೆ. ಮಾಜಿ ಸಂಸದ ಡಿ.ಕೆ.ಸುರೇಶ್ ಲೋಕಭವನಕ್ಕೆ ಭೇಟಿ ನೀಡಿ, ಪ್ರಮಾಣವಚನ ಸ್ವಿಕಾರ ಸಮಾರಂಭದ ಪೂರ್ವ ಸಿದ್ಧತೆಗಳನ್ನು ಪರಿಶೀಲಿಸಿದ್ದಾರೆ.ಗಾಜಿನ ಮನೆಯಲ್ಲಿ ಸುಮಾರು 500 ಜನರಿಗೆ ಮಾತ್ರ ಆಸನ ವ್ಯವಸ್ಥೆ ಮಾಡಲು ಅವಕಾಶವಿದೆ.ಆದರೆ ಈಗಾಗಲೇ ಒಂದು ಸಾವಿರಕ್ಕೂ ಹೆಚ್ಚು ಪಾಸ್‌ಗಳನ್ನು ವಿತ-ರಿಸಲಾಗಿದೆ. ಇದರಿಂದ ಲೋಕಭವನದ ಒಳಗೂ ನೂಕು ನುಗ್ಗಲಿನ ವಾತಾವರಣ ನಿರ್ಮಾಣವಾಗುವ ಸಾಧ್ಯತೆ ಇದೆ.

ಲೋಕಭವನದ ಹೊರಗೆ ರಸ್ತೆ ಸಂಚಾರವನ್ನು ಸ್ಥಗಿ-ತಗೊಳಿಸಿ,ಬ್ಯಾರಿಕೇಡ್ ಹಾಕಲಾಗಿದೆ.ಸಮಾರಂಭದ ವೀಕ್ಷಣೆಗೆ ಅನುಕೂಲವಾಗಲು ದೊಡ್ಡ ದೊಡ್ಡ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುತ್ತಿದೆ. ಹೆಚ್ಚು ಜನ ಕಾರ್ಯಕ್ರಮಕ್ಕೆ ಆಗಮಿಸದಂತೆ ಮನವಿ ಮಾಡಲಾಗುತ್ತಿದೆ.

ಪುಟ-2

## ಡಿಕೆಶಿ ಸಿಎಂ ಆಗುತ್ತಿದ್ದಂತೆ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನದಲ್ಲೂ ಬದಲಾವಣೆ ವದಂತಿ..?






ಬೆಂಗಳೂರು: ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ವಚನ ಸ್ವಿಕರಿಸಲು ಕ್ಷಣಗಣನೆ ಆರಂಭವಾಗಿರುವಂತೆ, ಇತ್ತ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನ ಪಲ್ಲಟವಾಗಲಿದೆ ಎಂಬ ವದಂತಿ ಹಬ್ಬಿದೆ.

ಶಾಡೋ ಸಿ.ಎಂ (ಛಾಯಾ ಮುಖ್ಯಮಂತ್ರಿ) ಎಂದೇ ಕರೆಯಲ್ಪಡುವ ವಿಧಾನಸಭೆಯ ಪ್ರತಿಪಕ್ಷದ ನಾಯಕನ ಸ್ಥಾನ ರಾಜ-ಕೀಯವಾಗಿ ಅತ್ಯಂತ ಮಹತ್ವದ ಸಂವಿಧಾನಿಕ ಹುದ್ದೆಯಾಗಿದೆ.ಸರ್ಕಾರವನ್ನು ಸದನದ ಹೊರಗೆ ಹಾಗೂ ಒಳಗೆ ಇಕ್ಕಟ್ಟಿಗೆ ಸಿಲುಕಿಸುವುದು, ವೈಫಲ್ಯಗಳನ್ನು ಜನರಿಗೆ ಮನವರಿಕೆ ಮಾಡಿಕೊಡುವುದು

ಪುಟ-2

## ಒಗ್ಗಟ್ಟಿನ ಕೊರತೆ : ಜಿಲ್ಲೆಗೆ ಸಚಿವ ಸ್ಥಾನ ಕಗ್ಗಂಟು ಒಬ್ಬೊಬ್ಬರದು ಒಂದೊಂದು ಸಮಸ್ಯೆ..!





ರಾಯಚೂರು:ನೂತನ ಮುಖ್ಯಮಂತ್ರಿಯಾಗಿ ಡಿ.ಕೆ.ಶಿವುಕುಮಾರ ಅಧಿಕಾರ ಗ್ರಹಣಕ್ಕೆ ಕ್ಷಣಗಣನೆ ಪ್ರಾರಂಭವಾಗಿರುವಾಗ ಜಿಲ್ಲೆಯ ಯಾರಿಗೆ ಸಚಿವ ಸ್ಥಾನ ದೊರೆಕುತ್ತದೆ ಎಂಬ ನಿರೀಕ್ಷೆ ಕಗ್ಗಂಟ್ಟಾಗಿ ಉಳಿದಿದೆ.

ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ನಾಲ್ಕು ಸ್ಥಾನ ಪಡೆದಿರುವ ಕಾಂಗ್ರೆಸ್ ಪಕ್ಷ ಸಚಿವ ಸ್ಥಾನ ಪಡೆದುಕೊಳ್ಳುವಲ್ಲಿ ಸ್ವಪಕ್ಷೀಯ ಭಿನ್ನಮತವೇ ಕಾರಣವಾಗಿರುವಾಗ ಈ ಬಾರಿ ಸಚಿವ ಸ್ಥಾನ ದೊರೆಯುವ ಆಸೆಯೂ ಆಶಾಗೋಪುರವಾಗಿ ಯೇ ಉಳದಿರುವದು ವಿಪರ್ಯಾಸ.

ಸೇವಾಹಿರಿತನ,ಜಾತಿಲೆಕ್ಕಚಾರದಲ್ಲಿ ಯಾದರೂ ಜಿಲ್ಲೆಯ ಒಬ್ಬರಿಗಾದರೂ ಸಚಿವ ಸ್ಥಾನ ದೊರಕಿತೆನ್ನುವ ಜನತೆ ನಿರೀಕ್ಷೆಯಾಗಿದೆಯಾದರೂ ಪಕ್ಷದ ಹೈಕಮಾಂಡನ ಮೇಲೆ ಪ್ರಭಾವ ಬೀರುವ ನಿಟ್ಟಿನಲ್ಲಿ ಎದುರಾಗಿರುವ ಒಗ್ಗ ಟ್ಟಿನೆ ಕೊರತೆಯೇ ಅಡ್ಡಿಯಾಗಿದೆ.

ಹಾಲಿ ಸಚಿವರಾಗಿದ್ದ ಎನ್.ಎಸ್.ಭೋಸರಾಜ ವಿಧಾನ ಪರಿಷತ್ ಸದಸ್ಯರಾಗಿ ಸಚಿವರಾಗಿದ್ದರು.

ಪುಟ-2

## ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಕೆಗೆ ಆಗ್ರಹಿಸಿ ದಲಿತ ಸೇನೆ ಪ್ರತಿಭಟನೆ



ರಾಯಚೂರು: ಮೈಸೂರು ಪೆಟ್ರೋ ಕೆಮಿಕಲ್ಸ್ ಲಿಮಿಟೆಡ್ ಕಂಪನಿ ಬಾಕಿ ವೇತನ ಸೇರಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ದಲಿತ ಸೇನೆ ವತಿಯಿಂದ ಐಜಿಪಿಎಲ್ ಕಾರ್ಖಾನೆಯ ಎದುರು ಬೃಹತ್ ಪ್ರತಿಭಟನೆ ನಡೆಸಲಾಯಿತು.

ನಗರದ ಹೊರವಲಯದ ಹೆಗ್ಗಸನಹಳ್ಳಿ ಗ್ರಾಮದ ಬಳಿ ಇರುವ 108 ಎಕರೆ ಪ್ರದೇಶದಲ್ಲಿ ಮೈಸೂರು ಪೆಟ್ರೋ ಕೆಮಿಕಲ್ ಲಿಮಿಟೆಡ್ ಕಂಪನಿಯು ಕಾರ್ಯ

ನಿರ್ವಹಿಸುತ್ತಿತ್ತು ಆದರೆ ಏಕಾಏಕಿ 2013ರಲ್ಲಿ ಕಾರ್ಯಚಟುವಟಿಕೆ

ಪುಟ-2

## ದಾಖಲಾತಿ ಆಂದೋಲನ ಜಾಥಾ ಮೂಲಕ ಸರ್ಕಾರಿ ಶಾಲೆಗಳ ಮಹತ್ವ ಸಾರಿದ ವಿದ್ಯಾರ್ಥಿಗಳು



ರಾಯಚೂರು: ತಾಲೂಕಿನ ಅಸ್ಕಿಹಾಳ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವತಿಯಿಂದ ಶಾಲಾ ದಾಖಲಾತಿ ಆಂದೋಲನ ಅಂಗವಾಗಿ ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ಶಾಲೆಯ ವಿದ್ಯಾರ್ಥಿಗಳು, ಮುಖ್ಯಗುರು, ಎಸ್ ಡಿಎಂಸಿ ಅಧ್ಯಕ್ಷರು ಹಾಗೂ ಸದಸ್ಯರು, ಶಿಕ್ಷಕರು ಮತ್ತು

ಪುಟ-2

## ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಪೂರ್ವಭಾವಿ ಸಭೆ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಅಚ್ಚುಕಟ್ಟಾಗಿ ಆಚರಿಸಿ-ಹಂಪಣ್ಣ ಸಜ್ಜನ್



ರಾಯಚೂರು: ಜಿಲ್ಲಾಡಳಿತದಿಂದ ಜೂ.12ರಂದು ವಿಶ್ವ ಬಾಲಕಾರ್ಮಿಕ ವಿರೋಧಿ ದಿನವನ್ನು ಅಚ್ಚುಕಟ್ಟಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಕ್ರಮ ವಹಿಸುವಂತೆ ಸಹಾಯಕ

ಆಯುಕ್ತಡಾ.ಹಂಪಣ್ಣಸಜ್ಜನ್ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅವರಿಂದು ನಗರದ ಜಿಲ್ಲಾಡಳಿತ ಭವನದ ಸಹಾಯಕ ಆಯುಕ್ತರ ಕಚೇರಿ ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ

ಹಮ್ಮಿಕೊಂಡಿದ್ದ ಪೂರ್ವಭಾವಿ

ಪುಟ-2

## ಶಾಸಕ ದದ್ದಲ ಬಸನಗೌಡರಿಗೆ ಸಚಿವ ಸ್ಥಾನ ನೀಡಿ. ಉಸ್ತುವಾರಿ ಸಚಿವರನ್ನಾಗಿಸಲಿ-ನಾಗೇಂದ್ರಪ್ಪ ಮಟಮಾರಿ



ರಾಯಚೂರು: ಗ್ರಾಮೀಣ ಶಾಸಕ ಬಸನಗೌಡ ದದ್ದಲ್ ಇವರಿಗೆ ಸಚಿವಸ್ಥಾನ ನೀಡಿ ಜಿಲ್ಲಾ ಉಸ್ತುವಾರಿಗಳನ್ನಾಗಿ ಮಾಡಬೇಕೆಂದು ಗಿಲ್ಲೇಸೂಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗೇಂದ್ರಪ್ಪ ಮಟಮಾರಿ ಆಗ್ರಹಿಸಿದರು.ಅವರಿಂದು ಮಾಧ್ಯಮಗೋಷ್ಠಿ ಉದ್ದೇಶಿಸಿಮಾತನಾಡಿ ಎರಡು ಬಾರಿ ಶಾಸಕರಾಗಿರುವ ದದ್ದಲ ಬಸನಗೌಡ ಇವರು ಯುವಕರಾಗಿದ್ದು ಜನಪರ ಕಾಳಜಿಯಿಂದ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡಿ ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮೀಣ ಕ್ಷೇತ್ರಕ್ಕೆ ಇಲ್ಲಿಯವರೆಗೆ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಚಿವ ಸ್ಥಾನ ದೊರಕಿಲ್ಲ. ನೂತನ ಸಚಿವ ಸಂಪುಟದಲ್ಲಿ ಸಚಿವರನ್ನಾಗಿಸದರೆ ಮತ್ತಷ್ಟು ಪಕ್ಷದ ಸಂಘಟನೆ, ಅಭಿವೃದ್ಧಿ ಕಾರ್ಯಗಳು ನಡೆಯಲು ಸಾಧ್ಯವಾಗುತ್ತದೆ ಎಂದರು.

ಪಕ್ಷ ಸಂಘಟನೆಯನ್ನು ಭದ್ರಗೊಳಿಸಿ ಅನೇಕ ಪಕ್ಷದ ಕಾರ್ಯಕರ್ತರಿಗೆ ರಾಜಕೀಯ ಅಧಿಕಾರ ಒದಗಿಸುವ ಜೊತೆಗೆ ಬಂಗಾರಪ್ಪ ಕೆರೆ ಭರ್ತಿ, ಬಸಣ್ಣ ಕೆರೆ ಅಭಿವೃದ್ಧಿ ಮಂಚಲಿಯಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್, ಹೊಸದಾಗಿ ಮಟ ಮಾರಿ ವೀರಭದ್ರೇಶ್ವರ

ಪುಟ-2

## ಎನ್‌ಇಟಿ ಫಾರ್ಮಸಿ ಕಾಲೇಜಿನಲ್ಲಿ ಔಷಧೋದ್ಯಮ



ರಾಯಚೂರು: ನಗರದ ನವೋದಯ ಶಿಕ್ಷಣ ಸಂಸ್ಥೆಯ ಎನ್‌ಇಟಿ ಫಾರ್ಮಸಿ ಕಾಲೇಜಿನಲ್ಲಿ ಔಷಧೋದ್ಯಮ ವೃತ್ತಿಗಳಲ್ಲಿ ಕೃತಕ ಬುದ್ಧಿಮತ್ತೆ ಕುರಿತು ಆರು ದಿನಗಳ ಕಾರ್ಯಾಗಾರವು ಪ್ರಾರಂಭವಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸ್ಥೆಯ ಶೈಕ್ಷಣಿಕ ಮತ್ತು ಸಂಶೋಧನೆ ವಿಭಾಗದ ನಿರ್ದೇಶಕ ಡಾ. ವಿ. ರಾಮ ಮೋಹನ್ ಗುಪ್ತ ಅವರು ಔಷಧ ಉದ್ಯಮದ ವೃತ್ತಿಗಳಲ್ಲಿ ಇಂದು ಕೃತಕ ಬುದ್ಧಿ ಮತ್ತೆ ತಂತ್ರಜ್ಞಾನವನ್ನು

ಪುಟ-2

## RCB ಮ್ಯಾಚ್ ಮಧ್ಯೆಯೂ ಕಲೆಗೆ ಜಯ: ಜ್ಯೋತಿ ಬಳ್ಳಾರಿ ಸಹಾಯಾರ್ಥ ನಾಟ್ಯ-ನಾಟಕ ಪ್ರದರ್ಶನಕ್ಕೆ ರಾಯಚೂರು ಜನ ಸಾಗರ

ರಾಯಚೂರು : RCB ತಂಡದ ನಿರ್ಣಾಯಕ ಕ್ರಿಕೆಟ್ ಪಂದ್ಯ ನಡೆಯುತ್ತಿದ್ದರೂ ಕಲಾಭಿಮಾನಿಗಳು ಕ್ರೀಡಾಂಗಣಕ್ಕಿಂತ ರಂಗಮಂದಿರಕ್ಕೆ ಮಹತ್ವ ಕೊಟ್ಟರು. ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಭಾನುವಾರ ಖ್ಯಾತ ನೃತ್ಯಗಾರತಿ ಜ್ಯೋತಿ ಬಳ್ಳಾರಿ ಅವರ ಸಹಾಯಾರ್ಥವಾಗಿ ಆಯೋಜಿಸಿದ್ದ ನೃತ್ಯ ಕಾರ್ಯಕ್ರಮ ಹಾಗೂ "ಹೌದಲೇ ರಂಗಿ, ಉದಲೇನು ಪುಂಗಿ" ಹಾಸ್ಯ ನಾಟಕ ಪ್ರದರ್ಶನವು ಜನಸಾಗರವನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು.

ಶ್ರೀ ದುರ್ಗಾ ಶಕ್ತಿ ನಾಟ್ಯಸಂಘ ಗೋಕಾಕ್ ಮತ್ತು ಬಳ್ಳಾರಿ ಜ್ಯೋತಿ ಅವರ ಸಂಯುಕ್ತ ಆಶ್ರಯದಲ್ಲಿ, ಶ್ರೀ ಸಂಗಮೇಶ್ವರ ಸಾಂಸ್ಕೃತಿಕ ಹಾಗೂ ನಾಟ್ಯ ಸಂಘ ಗುಳೇದಗುಡ್ಡ ಅವರ ಸಹಕಾರದೊಂದಿಗೆ ಈ ಕಾರ್ಯಕ್ರಮ ರೂಪುಗೊಂಡಿತು. ಜ್ಯೋತಿಯನ್ನ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜೆ.ಡಿ.ಎಸ್ ಪಕ್ಷದ ರಾಜ್ಯ ಘಟಕದ ಪ್ರಮುಖ ಪದಾಧಿಕಾರಿ ಮಹಾಂತೇಶ್ ಪಾಟೀಲ್ ಅತ್ತನೂರು ಮಾತನಾಡಿ, "ಜ್ಯೋತಿ ಬಳ್ಳಾರಿ ಅವರು ನಮ್ಮ ಭಾಗದ ಹಲವು ನಾಟಕಗಳಲ್ಲಿ ತಮ್ಮ ನೃತ್ಯದ ಮೂಲಕ ಪ್ರೇಕ್ಷಕರ ಮನಗೆದ್ದಿದ್ದಾರೆ. ಅವರು ಡ್ಯಾನ್ಸ್ ಮಾಡುತ್ತಾರೆ ಎಂದರೆ ನೋಡಲು ಸಾವಿರಾರು ಜನ ಸೇರುತ್ತಿದ್ದರು. ಇಂತಹ ಕಲಾವಿದರು ಸಂಕಷ್ಟದಲ್ಲಿರುವಾಗ ನಾವೆಲ್ಲರೂ ತನು-ಮನ-ಧನದಿಂದ ನೆರವಾಗುವುದು ನಮ್ಮೆಲ್ಲರ ಧರ್ಮ" ಎಂದರು.

ಕನ್ನಡ ಜಾನಪದ ಪರಿಷತ್ತಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಡಾ. ದಂಡಪ್ಪ ಬಿರಾದಾರ

ಪುಟ-2

## ಬಸನಗೌಡರಿಗೆ ಸಚಿವ ಸ್ಥಾನ ನೀಡಲು ಶ್ರೀ ಸೂಗೂರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ

ರಾಯಚೂರು: ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಅವ-ರಿಗೆ ಸಚಿವ ಸ್ಥಾನ ನೀಡುವಂತೆ ಪ್ರಾರ್ಥಿಸಿ ದೇವಸಗೂರಿನ ಶ್ರೀ ಸೂಗೂರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಮಹಿಳಾ ಕಾಂಗ್ರೆಸ್ ಮುಖಂಡರಾದ ಶಶಿಕಲಾ ಭೀಮರಾಯ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಶ್ರೀ ಸೂಗೂರೇಶ್ವರ ದೇವರಿಗೆ ವಿಶೇಷ ಪೂಜೆ ನೆರವೇರಿಸಿ ಪ್ರಾರ್ಥನೆ ಸಲ್ಲಿಸಿದರು.

ರಾಯಚೂರು ಗ್ರಾಮೀಣ ಕ್ಷೇತ್ರದಿಂದ ಎರಡು ಭಾರಿ ಶಾಸಕರಾಗಿ ಆಯ್ಕೆಯಾಗಿದ್ದು, ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಜನಮನ್ನಣೆಗೆ ಪಾತ್ರರಾಗಿದ್ದಾರೆ. ಸಚಿವ ಸ್ಥಾನ ನೀಡುವುದರಿಂದ ಕ್ಷೇತ್ರದ ಅಭಿವೃದ್ಧಿ ಜೊತೆಗೆ ಪಕ್ಷದ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ಕಳೆದ ಭಾರಿಯೇ ಬಸನಗೌಡರಿಗೆ ಸಚಿವ ಸ್ಥಾನ

ನೀಡಬೇಕಿತ್ತು. ಆದರೇ ಈ ಭಾ-ರಿಯಾದರೂ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ವರಿಷ್ಠರಲ್ಲಿ ಮನವಿ ಮಾಡಿದರು. ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿರುವ ಬಸನಗೌಡ ದದ್ದಲ ಅವರಿಗೆ ಸಚಿವ ಸ್ಥಾನ ನೀಡುವುದ-ರಿಂದ ಕಲ್ಯಾಣ ಕರ್ನಾಟಕ ಭಾಗ ಸೇ-ರಿದಂತೆ ರಾಜ್ಯದಲ್ಲಿ ಪಕ್ಷದ ಸಂಘಟನೆಗೆ ಅನುಕೂಲವಾಗಲಿದೆ ಎಂದರು.

ಈ ಸಂದರ್ಭದಲ್ಲಿ ರಾಯಚೂರು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಇದ್ದರು.

# ಡಿಕೆಶಿ ಪದಗ್ರಹಣಕ್ಕೆ ಭರದ ಸಿದ್ಧತೆ

ಆರಂಭದಲ್ಲಿ ಸುಮಾರು 20 ಸಾವಿರ ಜನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಲಾಗಿತ್ತು. ಆದರೆ ಹೈಕಮಾಂಡ್ ಸೂಚನೆ ಹಿನ್ನೆಲೆಯಲ್ಲಿ ಸರಳ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಿದ್ದರಾಮಯ್ಯ ಅವರ ರಾಜೀನಾಮೆ ಬಳಿಕ ಡಿ.ಕೆ.ಶಿವಕುಮಾರ್ ಅವರು ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದು, ನಾಳೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವಿ□ಕ-ರಿಸುತ್ತಿದ್ದಾರೆ. ಈ ಮೂಲಕ ದೇಶದ ಶ್ರಿ□ಮಂತ ಮುಖ್ಯಮಂತ್ರಿ ಎಂಬ ಕೀರ್ತಿಗೆ ಬಾಜನರಾಗಲಿದ್ದಾರೆ.ಈವರೆಗೂ ಸಂಪುಟಕ್ಕೆ ಎಷ್ಟು ಜನ ಸಚಿವರ ಸೇರ್ಪಡೆಯಾಗಲಿದ್ದಾರೆ ಎಂಬುದು ಖಚಿತವಾಗಿಲ್ಲ, ಕಾಂಗ್ರೆಸ್□ ಹೈಕಮಾಂಡ್ ಕೊನೆಯ ಕ್ಷಣದವರೆಗೂ ಗುಟ್ಟು ಬಿಟ್ಟುಕೊಟ್ಟಿಲ್ಲ. ಆದರೆ ಕಾಂಗ್ರೆಸ್□ನ ಎಲ್ಲಾ ಶಾಸಕರಿಗೂ ಬೆಂಗಳೂರಿನ ಕೇಂದ್ರ ಸ್ಥಾನದಲ್ಲೆ□ ಇರುವಂತೆ ಸೂಚನೆ ನೀಡಲಾಗಿದೆ.

ಯಾರಿಗೆ ಅದೃಷ್ಟ ಒಲಿಯಲಿದೆ, ಯಾರು ಅವಕಾಶ ವಂಚಿತರಾಗಲಿದ್ದಾರೆ ಎಂಬುದು ತೀವ್ರ ಚರ್ಚೆಗೆ ಗ್ರಾಸವಾಗಿದೆ. ಕಾಂಗ್ರೆಸ್□ನಲ್ಲಿ 8 ವರ್ಷ 14 ದಿನ ಮುಖ್ಯಮಂತ್ರಿಯಾಗಿದ್ದ ಸಿದ್ಧರಾಮಯ್ಯ ಅವರ ಆಳ್ವಿಕೆ ಕೊನೆಗೊಳ್ಳುತ್ತಿದ್ದು, ಡಿ.ಕೆ.ಶಿವಕುಮಾರ್ ಅವರ ಪರ್ವ ಆರಂಭವಾಗಲಿದೆ.ಬಹಳ ವರ್ಷಗಳ ನಂತರ ಮೂಲ ಕಾಂಗ್ರೆಸ್ಸಿಗ ಹಾಗೂ ನಿಷ್ಠಾವಂತ ಕಾರ್ಯಕರ್ತರೊಬ್ಬರಿಗೆ ಅಧಿಕಾರ ಸಿಗುತ್ತಿರುವುದರಿಂದ ಸಂಭ್ರಮ ಮನೆ ಮಾಡಿದೆ. ನಗರ ಪೂರ್ತಿ ಮಧುವಣ-ಗಿತ್ತಿಯಂತೆ ಶೃಂಗಾರಗೊಂಡಿದೆ.

ಫ್ಲೆಕ್□□, ಬ್ಯಾನರ್‌ಗಳ ಮೂಲಕ ಬೆಂಗಳೂರಿನ ಅಂದ ಕೆಡಿಸಬೇಡಿ ಎಂದು ಡಿ.ಕೆ.ಶಿವಕುಮಾರ್ ಹಲವು ಬಾರಿ ಮಾಡಿರುವ ಮನವಿಗೂ ಕಾಂಗ್ರೆಸ್□ ಕಾರ್ಯಕರ್ತರು ಕ್ಯಾರೆ ಎಂದಿಲ್ಲ.

ಬೆಂಗಳೂರಿನ ಎಲ್ಲಾ ಮುಖ್ಯರಸ್ತೆಗಳು ಹಾಗೂ ವೃತ್ತಗಳಲ್ಲಿ ಫ್ಲೆಕ್□□, ಬ್ಯಾನರ್‌ಗಳು ರಾರಾಜಿಸುತ್ತಿವೆ. ಸಣ್ಣಪುಟ್ಟ ನಾಯಕ-ರಿಂದ ಹಿಡಿದು ದೊಡ್ಡ ದೊಡ್ಡ ನಾಯಕರವರೆಗೂ ಫೋಟೊ ಸಹಿತ ಬ್ಯಾನರ್‌ಗಳ ಮೂಲಕ ಶುಭಾಶಯ ತಿಳಿಸುತ್ತಿದ್ದಾರೆ.

2023ರಲ್ಲೆ□ಡಿ.ಕೆ.ಶಿವಕುಮಾರ್ ಅವರಿಗೆ ಮುಖ್ಯಮಂತ್ರಿಸ್ಥಾನ ಸಿಗಲಿದೆ ಎಂದು ಅಭಿಮಾನಿಗಳು ಭಾರೀ ನಿರೀಕ್ಷೆ ಹೊಂದಿದ್ದರು. ಆದರೆ ಪಕ್ಷದ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಮೊದಲ ಅವಧಿಗೆ ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟಿತ್ತು. ಸುಮಾರು ಆರು ತಿಂಗಳ ನಿರಂತರ ಸಂಘರ್ಷದ ಮೂಲಕ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗುವ ಅವಕಾಶ ಪಡೆದಿದ್ದಾರೆ.ಹೀಗಾಗಿ ಬೆಂಗಳೂರು ದಕ್ಷಿಣ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಪ್ರಮುಖವಾದ ನಾಯಕರು ಹಾಗೂ ಕಾರ್ಯಕರ್ತರ ದಂಡು ಹರಿದು ಬರುತ್ತಿದೆ.ಪೊಲೀಸರು ಯಾವುದೇ ಅಹಿತಕರ ಘಟನೆಗಳಾಗದಂತೆ ಅಗತ್ಯ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದೋಬಸ್ತ್ ಆಯೋಜಿಸಲಾಗಿದೆ.

# ನಾಯಕನ ಸ್ಥಾನದಲ್ಲೂ ಬದಲಾವಣೆ ವದಂತಿ..?

ಸೇರಿದಂತೆ ಹಲವು ನಿರ್ಧಾರಗಳಲ್ಲಿ ಪ್ರತಿಪಕ್ಷದ ನಾಯಕನ ಸ್ಥಾನ ಪ್ರಮುಖ ಪಾತ್ರ ವಹಿಸುತ್ತದೆ.

ಡಿ.ಕೆ.ಶಿವಕುಮಾರ್ ಮುಖ್ ್ಯಮಂತ್ರಿಯಾಗುತ್ತಿರುವ ಹಿನ್ನಲೆಯಲ್ಲಿ ತನ್ನ ಕಾರ್ಯತಂತ್ರವನ್ನು ಬದಲಾಯಿಸಿರುವ ಬಿಜೆಪಿ ಅಕ್ರಮಣ ಶೈಲಿಯ ಹಾಗೂ ಸದನದಲ್ಲಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಕೊಂಚ ಯಶಸ್ವಿಯಾಗಿರುವ ಕಾರ್ಕಳ ವಿಧಾನಸಭಾ ಕ್ಷೇತ್ರದ ಶಾಸಕ ಸುನಿಲ್ ಕುಮಾರ್ ಅವರಿಗೆ ಈ ಸ್ಥಾನವನ್ನು ನೀಡಲು ಗಂಭೀರ ಚಿಂತನೆ ನಡೆಸಿದೆ ಎಂದು ಗೊತ್ತಾಗಿದೆ.

ಸರ್ಕಾರದ ವಿರುದ್ಧ ಪರಿಣಾಮಕಾರಿಯಾಗಿ ಹೋರಾಟ ನಡೆಸುವಲ್ಲಿ ಮತ್ತು ಆಡಳಿತ ಪಕ್ಷವನ್ನು ತೀವ್ರವಾಗಿ ಇಕ್ಕಟ್ಟಿಗೆ ಸಿಲುಕಿಸುವಲ್ಲಿ ಬಿಜೆಪಿ ನಾಯಕತ್ವ ವಿಫಲವಾಗಿದೆ ಎಂಬ ಅಭಿಪ್ರಾಯವು ಪಕ್ಷದ ಆಂತರಿಕ ವಲಯದಲ್ಲಿ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಪಕ್ಷದ ನಾಯಕನ ಬದಲಾವಣೆಯ ಚರ್ಚೆ ಮುನ್ನೆಲೆಗೆ ಬಂದಿದೆ.

ಸದ್ಯಕ್ಕೆ ರಾಜ್ಯ ಬಿಜೆಪಿ ನಾಯಕತ್ವ ಅಥವಾ ಹೈಕಮಾಂಡ್‌ನಿಂದ ಆರ್.ಅಶೋಕ್ ಅವರ ಬದಲಾವಣೆ ಕುರಿತು ಯಾವುದೇ ಅಧಿಕೃತ ಷಣೆಯಾಗಿಲ್ಲ. ರಾಜಕೀಯ ಪಕ್ಷಗಳಲ್ಲಿ ಇಂತಹ ಬದಲಾವಣೆಯ ಚರ್ಚೆಗಳು ಸಾಮಾನ್ಯವಾಗಿದ್ದರೂ, ಪ್ರತಿಪಕ್ಷದ ನಾಯಕನ ನೇಮಕವು ಪಕ್ಷದ ಹೈಕಮಾಂಡ್ ನಿರ್ಧಾರದ ಮೇಲೆ ಅವಲಂಬಿತವಾಗಿರುತ್ತದೆ. ಪ್ರಸ್ತುತ ಬಿಜೆಪಿ ನಾಯಕತ್ವವು ರಾಜಕೀಯ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ತಂತ್ರಗಳನ್ನು ರೂಪಿಸುತ್ತಿದೆ.

ವಿರೋಧ ಪಕ್ಷದ ನಾಯಕನಾದವರು ಸರ್ಕಾರವನ್ನು ಸದನದ ಒಳಗೆ ಮತ್ತು ಹೊರಗೆ ಕಠಿಣ ಪ್ರಶ್ನೆಗಳ ಮೂಲಕ ಇಕ್ಕಟ್ಟಿಗೆ ಸಿಲುಕಿಸುವುದು ಪ್ರಜಾಪ್ರಭುತ್ವದ ಆಶಯವಾಗಿದೆ.

ಆದರೆ, ಆರ್.ಅಶೋಕ್ ಅವರ ವಿರುದ್ಧ ಕೇಳಿಬರುತ್ತಿರುವ ಆರೋಪವೆಂದರೆ, ಮೃದು ಧೋರಣೆ. ಸರ್ಕಾರವನ್ನು ಉರುಳಿಸುವ ಅಥವಾ ಭ್ರಷ್ಟಾಚಾರದ ವಿಷಯಗಳಲ್ಲಿ ದೊಡ್ಡ ಮಟ್ಟದ ಆಂದೋಲನಗಳನ್ನು ರೂಪಿಸುವಲ್ಲಿ ಅವರು ವಿಫಲರಾಗಿದ್ದಾರೆ ಎಂಬುದು ಅವರ ಪಕ್ಷದ ಒಳಗಿನವರೇ ಕೆಲವೊಮ್ಮೆ ವ್ಯಕ್ತಪಡಿಸುವ ಅಸಮಾಧಾನ.

ಬಿಜೆಪಿ ಮತ್ತು ಜೆಡಿಎಸ್□ ಮೈತ್ರಿಕೂಟದ ನಡುವೆ ಹಾಗೂ ಪಕ್ಷದ ಹಿರಿಯ ನಾಯಕರ ನಡುವೆ ಸಂಪೂರ್ಣ ಸಮನ್ವಯದ ಕೊರತೆಯಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದು ಸರ್ಕಾರದ ವಿರುದ್ಧದ ಹೋರಾಟವನ್ನು ದುರ್ಬಲಗೊಳಿಸುತ್ತಿದೆ.

ಬೆಂಗಳೂರಿಗೆ ಸೀಮಿತ ಎಂಬ ಆರೋಪ :

ಆರ್.ಅಶೋಕ್ ಅವರ ಮೇಲೆ ಅತಿ ಹೆಚ್ಚು ಕೇಳಿಬರುತ್ತಿರುವ ಆರೋಪವೆಂದರೆ ಅವರು ಕೇವಲ ಬೆಂಗಳೂರು ಕೇಂದ್ರಿತ ನಾಯಕರಾಗಿದ್ದಾರೆ ಎಂಬುದು. ಅವರ ರಾಜಕೀಯ ಹಿನ್ನೆಲೆ ಮತ್ತು ವರ್ಚಸ್ಸುಬೆಂಗಳೂರಿನಲ್ಲಿ ಬಲವಾಗಿದ್ದರೂ, ಉತ್ತರ ಕರ್ನಾಟಕ ಅಥವಾ ಹಳೆಯ ಮೈಸೂರು ಭಾಗದ ಸಮಸ್ಯೆಗಳ ಬಗ್ಗೆ ಅವರು ಅಷ್ಟೊಂದು ಪ್ರಬಲವಾಗಿ ಧ್ವನಿ ಎತ್ತುತ್ತಿಲ್ಲ ಎಂಬ ಭಾವನೆ ರಾಜ್ಯದ ಇತರ ಭಾಗಗಳ ಮತದಾರರಲ್ಲಿ ಇದೆ.

ರಾಜ್ಯ ಮಟ್ಟದ ಸಮಸ್ಯೆಗಳಿಗಿಂತ ಹೆಚ್ಚಾಗಿ ಬೆಂಗಳೂ-ರಿನ ನಾಗರಿಕ ಸಮಸ್ಯೆಗಳು, ಬಡಾವಣೆಗಳ ಸಮಸ್ಯೆಗಳಿಗೆ ಸೀಮಿತವಾಗುವ ಮೂಲಕ ಅವರು ತಮ ವ್ಯಾಪ್ತಿಯನ್ನು ತಾವೇ ಮಿತಿಗೊಳಿಸಿಕೊಂಡಿದ್ದಾರೆ ಎಂಬ ಅಭಿಪ್ರಾಯ ಇದೆ. ಬಿಜೆಪಿಯಲ್ಲಿನ ಗುಂಪುಗಾರಿಕೆ ಮತ್ತು ನಾಯಕತ್ವಕ್ಕಾಗಿರುವ ಪೈಪೋಟಿ ಅಶೋಕ್ ಅವರ ಕಾರ್ಯಕ್ಷಮತೆಯ ಮೇಲೆ ಪ್ರಭಾವ ಬೀರುತ್ತಿರಬಹುದು.

ಅಶೋಕ್ ಅವರು ಮೂಲತಃ ಆಕ್ರಮಣಕಾರಿ ರಾಜ-ಕಾರಣಕ್ಕಿಂತ ಹೆಚ್ಚಾಗಿ ಸಂಘಟನಾತಕವಾಗಿ ಕೆಲಸ ಮಾಡುವ ಮಾಚಿರಬಹುದು. ರಾಜ್ಯವ್ಯಾಪಿ ಪ್ರಭಾವ ಬೀರಲು ಅವರು ಬೆಂಗಳೂರು ಕೇಂದ್ರಿತ ರಾಜಕಾರಣದಿಂದ ಹೊರಬಂದು, ರಾಜ್ಯದ ಪ್ರಮುಖ ಸಾರ್ವಜನಿಕ ಸಮಸ್ಯೆಗಳ ವಿಷಯದಲ್ಲಿ ಹೆಚ್ಚು ಗಟ್ಟಿಯಾಗಿ ಧ್ವನಿ ಎತ್ತಬೇಕಾದ ಅವಶ್ಯಕತೆಯಿದೆ ಎಂಬ ಮಾತು ಪಕ್ಷದ ವಲಯದಲ್ಲಿ ಕೇಳಿ ಬರುತ್ತಿದೆ.

ಸುನಿಲ್ ಕುಮಾರ್ ಅವರು ಹಿಂದುಳಿದ ವರ್ಗಗಳ ಪ್ರಬಲ ನಾಯಕರಾಗಿದ್ದು, ಪಕ್ಷದ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ. ಅವರನ್ನು ಮುಂಚೂಣಿಗೆ ತರುವ ಮೂಲಕ ಹಿಂದುಳಿದ ವರ್ಗಗಳ ಮತಬ್ಯಾಂಕ್ ಅನ್ನು ಬಲಪಡಿಸುವುದು ಮತ್ತು ಆಕ್ರಮಣಕಾರಿ ರಾಜಕೀಯವನ್ನು ಮುಂದುವರಿಸುವುದು ಬಿಜೆಪಿಯ ತಂತ್ರವಾಗಿರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಸುನಿಲ್ ಕುಮಾರ್ ಅವರು ಸದನದ ಒಳಗೆ ಮತ್ತು ಹೊರಗೆ ಸರ್ಕಾರದ ವೈಫಲ್ಯಗಳನ್ನು ಬಲವಾಗಿ ಪ್ರಶ್ನಿಸುವಲ್ಲಿ ಹೆಸರುವಾಸಿ. ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ಸಾಮರ್ಥ್ಯವನ್ನು ಅವರು ಹಲವಾರು ಬಾರಿ ಪ್ರದರ್ಶಿಸಿದ್ದಾರೆ. ಬಿಜೆಪಿಯು ಸಾಮಾಜಿ-ಕ ನ್ಯಾಯದ ಸಮೀಕರಣವನ್ನು ಗಮನದಲ್ಲಿಟ್ಟುಕೊಂಡು, ಹಿಂದುಳಿದ ವರ್ಗಗಳ ಬಲಿಷ್ಠ ನಾಯಕನಿಗೆ ಮಣೆ ಹಾಕಲು ನಿರ್ಧರಿಸಿದರೆ, ಸುನಿಲ್ ಕುಮಾರ್ ಅವರ ಹೆಸರು ಮುಂಚೂಣಿಯಲ್ಲಿರುವುದು ಸಹಜ. ಇದು ಪಕ್ಷಕ್ಕೆ ಮತಬ್ಯಾಂಕ್ ದೃಷ್ಟಿಯಿಂದಲೂ ಲಾಭದಾಯಕವಾಗಬಹುದು.

ದಕ್ಷಿಣ ಕನ್ನಡ ಭಾಗದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಅವರ ಪಾತ್ರ ದೊಡ್ಡದಿದೆ. ಸಂಘಟನೆಯಲ್ಲಿನ ದೀರ್ಘಕಾಲದ ಅನುಭವ ಮತ್ತು ಹೈಕಮಾಂಡ್‌ನೊಂದಿಗಿನ ಉತ್ತಮ ಬಾಂಧವ್ಯ ಅವರಿಗೆ ಪ್ಲಸ್- ಪಾಯಿಂಟ್ ಆಗಬಲ್ಲದು. ಪ್ರತಿಪಕ್ಷದ ನಾಯಕನ ಆಯ್ಕೆಯು ಕೇವಲ ಒಂದು ವ್ಯಕ್ತಿಯ ಆಯ್ಕೆಯಲ್ಲ, ಅದು ಪಕ್ಷದ ಒಟ್ಟಾರೆ ತಂತ್ರಗಾರಿಕೆಯಾಗಿದೆ. ಬಿಜೆಪಿಯಲ್ಲಿನ ವಿವಿಧ ಪ್ರಬಲ ಸಮುದಾಯಗಳ ನಾಯಕರ ನಡುವೆ ಸಮತಿ ಮೂಡಿಸುವುದು ಪಕ್ಷದ ಮುಂದಿರುವ ದೊಡ್ಡ ಸವಾಲು. ಪಕ್ಷದಲ್ಲಿ ಸುನಿಲ್ ಕುಮಾರ್ ಅವರ ಹೊರತಾಗಿ ಇನ್ನೂ ಹಲವು ಹಿರಿಯ ಮತ್ತು ಪ್ರಭಾವಿ ನಾಯಕರು ಈ ಸ್ಥಾನದ ಆಕಾಂಕ್ಷಿಗಳಾಗಿರಬಹುದು.

ಅವರ ನಡುವೆ ಹೇಗೆ ಸಮನ್ವಯ ಸಾಧಿಸಲಾಗುತ್ತದೆ ಎಂಬುದು ಮುಖ್ಯ.ಅಂತಿಮವಾಗಿ, ಕೇಂದ್ರದ ನಾಯಕತ್ವವು ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಅಳೆದು ತೂಗಿ ಸೂಕ್ತ ನಿರ್ಧಾರ ತೆಗೆದುಕೊಳ್ಳುತ್ತದೆ. ಸುನಿಲ್ ಕುಮಾರ್ ಅವರು ಪ್ರತಿಪಕ್ಷದ ನಾಯಕನ ಸ್ಥಾನಕ್ಕೆ ಸಮರ್ಥ ಅಭ್ಯರ್ಥಿ ಎಂಬುದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುವ ವಿಷಯವೇ ಹೌದು. ಅವರು ಪ್ರತಿಪಕ್ಷದ ನಾಯಕರಾದರೆ, ಸದನದಲ್ಲಿ ಸರ್ಕಾರದ ವಿರುದ್ಧದ ಚರ್ಚೆಗಳು ಇನ್ನಷ್ಟು ತೀವ್ರಗೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

# ಒಗ್ಗಟ್ಟಿನ ಕೊರತೆ : ಜಿಲ್ಲೆಗೆ ಸಚಿವ ಸ್ಥಾನ

ಆದರೆ ಈ ಬಾರಿ ಯತೀಂದ್ರ ಸಿದ್ದರಾಮಯ್ಯ, ಹಿರಿಯ ಕಾಂಗ್ರೆಸ್ಸಿಗ ಬಿ.ಕೆ. ಹರಿಪ್ರಸಾದ ಹಾಗೂ ಕೆಪಿಸಿಸಿ ಕಾರ್ಯದರ್ಶಿ ಮಹ್ಮದ ಸಲಿಂ ಹೆಸರು ಮುಂಚೂಣಿಯಲ್ಲಿರುವ ಪರಿಣಾಮ ಸಚಿವ ಸ್ಥಾನ

ದೊರಕುವ ಸಂಶಯಗಳು ಮೂಡಿವೆ. ಈಗಾಗಲೇ ಪಕ ಹೈಕಮಾಂಡ್‌ನ ಭೇಟಿ ಮಾಡಿ ಬಂದಿರುವ ಬೋಸರಾಜ ಇವರಿಗೆ ಸಚಿವ ಸ್ಥಾನ ದೊರಕುವದು ಸದ್ಯಕ್ಕಂತು ಸಾಧ್ಯವಿಲ್ಲ ಎನ್ನುವ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಇದೇ ಹೊತ್ತಿನಲ್ಲಿ ನಾಲ್ಕು ಬಾರಿ ಶಾಸಕರಾಗಿರುವ ಹಂಪನಗೌಡ ಬಾದರ್ಲಿಯವರಿಗೆ ಸಚಿವ ಸ್ಥಾನದ ದೊರಕುವ ವಿಷಯದಲ್ಲಿ ಚರ್ಚೆಗೆ ಬಂದಿದೆಯಾದರೂ ಲಿಂಗಾಯತ ಸಮಾಜದ ಅನೇಕರ ಪೈಪೋಟಿ ಅಡ್ಡಿಯಾಗಿದೆ. ಡಿ.ಕೆ. ಶಿವುಕುಮಾರ ಸೇರಿದಂತೆ ಸಿದ್ದರಾಮಯ್ಯನವರು ಸಹ ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಬೇಕೆನ್ನುವ ಬಯಕೆ ಹೊಂದಿದ್ದರೂ ಸಾಕಾರಗೊಳ್ಳುವದು ಸುಲಭವಾಗಿಲ್ಲ ಎಂಬುದು ಚರ್ಚೆಯ ವಿಷಯ. ಜಾತಿಲೆಕ್ಕಚಾರದಲ್ಲಿಯೇ ಸಚಿವ ಸ್ಥಾನ ಹಂಚಿಕೆ ಮಾಡುವದ ಪರಿಣಾಮ ಜಿಲ್ಲಾವಾರು ಸಚಿವ ಸಾನ ದೊರೆಯುವದೆಂಬ ನಿರೀಕ್ಷೆ ಹುಸಿಯಾಗುವಂತಾಗಿದೆ. ಇನ್ನುಳಿದಂತೆ ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ ಹಾಗೂ ಗ್ರಾಮೀಣ ಶಾಸಕ ದದ್ದಲ ಬಸನಗೌಡ ಇವರಿಗೆ ಎಸ್‌ಟಿ ಖೋಟಾದಲ್ಲಿಯಾದರೂ ಸಚಿವ ಸ್ಥಾನ ದೊರೆಯಬೇಕೆನ್ನು ಬೇಡಿ ಕೆಯಿದೆ. ಆದರೆ ಎಸ್‌ಟಿ ಸಮೂದಾಯ ಆಗಿರುವ ಅನ್ಯಾಯ ಸರಿಪಡಿಸುವ ಒತ್ತಾಯವಿದ್ದರೂ ಬೇರೆ ಜಿಲ್ಲೆಯಲ್ಲಿರುವ ಎಸ್‌ಟಿ ಶಾಸಕರಿಗೆ ಸಚಿವ ಸ್ಥಾನ ಹಂಚಿಕೆಯಾಗುವ ಸಾಧ್ಯತೆಗಳೇ ಹೆಚ್ಚು. ಇನ್ನುಳಿದಂತೆ ಇಬ್ಬರು ವಿಧಾನ ಪರಿಷತ್ ಸದಸ್ಯರಿದ್ದು ಡಿ.ಕೆ.ಶಿವುಕುಮಾರ ಗುಂಪಿನಲ್ಲಿ ಗುರುತಿಸಿಕೊಂಡಿರುವ ಬಸನಗೌಡ ಬಾದರ್ಲಿ ಹಾಗೂ ಎ.ವಸಂತಕುಮಾರ ಇವರಿಗೆ ಸಚಿವ ಸ್ಥಾನ ನೀಡಬೇಕೆನ್ನುವ ಬೇಡಿಕೆಯಿದೆ. ಆದರೆ ವಿಧಾನ ಪರಿಷತ್ ಸದಸ್ಯರಿಗೆ ಸಚಿವ ಸ್ಥಾನ ನೀಡುಬೇಕಿರುವದಿರಂದ ಪ್ರಥಮ ಬಾರಿಗೆ ಪರಿಷತ್ ಸದಸ್ಯರಾದರಿಗೆ ನೀಡುವದು ಅನುಮಾನ. ಇನ್ನೂ ಮಾದಿಗ ಸಮಾಜದವರಿಗೆ ಸಚಿವ ಸ್ಥಾನ ನೀಡುವಾಗ ಮುಧೋಳ ಶಾಸಕ ಆರ್.ಬಿ.ತಿಮ್ಮಾಪುರು ಇವರಿಗೆ ಸಚಿವ ಸ್ಥಾನ ನೀಡದೇ ಹೋದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಪ್ರಯತ್ನಿಸಿದರೆ ಮಾತ್ರ ಎ.ವಸಂತಕುಮಾರ ಇವರಿಗೆ ಸಚಿವ ಸ್ಥಾನ ದೊರೆಯುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ. ಆದರೆ ಜಿಲ್ಲೆಯ ಕಾಂಗ್ರೆಸ್ ಪಕ್ಷದ ಶಾಸಕರುಗಳಲ್ಲಿರುವ ಗುಂಪುಗಾ-ರಿಕೆಯಿಂದ ಜಿಲ್ಲೆಯ ಅಭಿವೃದ್ಧಿಗೆ ಹಿನ್ನಡೆಯಾಗುವಂತಾಗಿದೆ. ಒಗ್ಗಟ್ಟಾಗಿ ಪ್ರಯತ್ನಗಳು ನಡೆಯದೇ ಇರುವ ಪರಿಣಾಮ ಜಿಲ್ಲೆಗೆ ಸಚಿವಸ್ಥಾನ ದೊರೆಯುವ ಅನುಮಾನಗಳೇ ಹೆಚ್ಚಾಗಿವೆ. ರಾಜಕೀಯ ಪ್ರಭಾವ, ಜಾತಿ ಲೆಕ್ಕಚಾರ ಯಾವ ರೀತಿ ಪರಿಣಾಮ ಬೀರಬಲ್ಲದು ಎಂಬದರ ಮೇಲೆ ಜಿಲ್ಲೆಯ ಸಚಿವ ಸ್ಥಾನ ಅವಲಂಬಿತವಾಗಿದೆ.!

ಕಳೆದ ಬಾರಿ ಜಿಲ್ಲೆಯ ಎರಡುಗುಂಪುಗಳ ಪರಿಣಾಮವೇ ಜಿಲ್ಲೆಗೆ ಸಚಿವಸ್ಥಾನ ಕೈ ತಪ್ಪಿ ಬೇರೆ ಜಿಲ್ಲೆಯವರು ಉಸ್ತುವಾರಿಯಾಗಬೇಕಾಯಿತು. ಈ ಬಾರಿಯೂ ಪರಸ್ಥಿತಿ ಭಿನ್ನವಾಗಿಲ್ಲ. ನನಗೆ ಸಿಗದ ಸಚಿವ ಸ್ಥಾನ ಬೇರೆಯವರಿಗೆ ದೊರೆಯಬಾರದೆಂಬ ಮನಸ್ಥಿತಿಯಿಂದ ಶಾಸಕರುಗಳು ಹೊರಬಂದಿಲ್ಲ.

## ಕಾರ್ಮಿಕರ ವಿವಿಧ ಬೇಡಿಕೆಗಳನ್ನು ಈಡೇರಿಕೆಗೆ ಆಗ್ರಹಿಸಿ ದಲಿತ ಸೇನೆ ಪ್ರತಿಭಟನೆ

ಸ್ಥಗಿತಗೊಳಿಸಿದ್ದ ಪರಿಣಾಮ ಅಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕಾರ್ಮಿಕರು ಉದ್ಯೋಗ ಕಳೆದುಕೊಂಡು ಸಂಕಷ್ಟಕ್ಕೆ ಒಳಗಾಗಿದ್ದರು.

ಈ ಕುರಿತು ನ್ಯಾಯಾಲಯವು ಕಾರ್ಮಿಕರಿಗೆ ಬಾಕಿ ವೇತನ ಪಾವತಿಸುವಂತೆ ತೀರ್ಪು ನೀಡಿದ್ದರೂ ಇಂದಿಗೂ ಬಾಕಿ ವೇತನ ಪಾವತಿಸಿಲ್ಲ. ಕಲಬುರಗಿ ಹೈಕೋರ್ಟ್‌ನಲ್ಲಿ ಈ ಕುರಿತು ಇನ್ನೂ ತೀರ್ಪು ಹೊರಬಂದಿಲ್ಲ ಇದೀಗ ಮೈಸೂರು ಪೆಟ್ರೋಕೆಮಿಕಲ್ಸ್

ಮತ್ತು ಐಜಿ ಪೆಟ್ರೋಕೆಮಿಕಲ್ಸ್ ಕಂಪನಿಯ ಮಾಲಿಕರು ಒಬ್ಬರೇ ಎಂಬ ಮಾಹಿತಿ ಲಭ್ಯವಾಗಿದ್ದು, ಮೈಸೂರು ಪೆಟ್ರೋಕೆಮಿಕಲ್ ಕಾರ್ಮಿಕರಿಗೆ ಬಾಕಿ ವೇತನ ಪಾವತಿಸದೇ ಇದೀಗ ಐಜಿ ಕಂಪನಿಯ ಹೆಸರಿನಲ್ಲಿ ಕಾರ್ಯಗಳನ್ನು ಆರಂಭಿಸಲು ಹೊರಟಿದ್ದು, ಇದರಿಂದ ಅಲ್ಲಿನ ಕಾರ್ಮಿಕರು ಮತ್ತು ರೈತರಿಗೆ ಮೋಸವಾಗುತ್ತಿದೆ ಎಂದು ಆರೋಪಿಸಿದರು.

ಇದಲ್ಲದೇ ಸಂಸ್ಥೆಯವರು 500 ಎಕರೆ ಕೃಷಿ ಜಮೀನನ್ನು ಸ್ಥಳೀಯ ರೈತರಿಗೆ ಲೀಸ್ ಪಡೆದುಕೊಂಡು ಹುಲ್ಲು ಬೆಳೆಯುತ್ತಿದ್ದಾರೆ. ಇದರಿಂದ ಪರಿಸರದ ಮೇಲೆ ದುಷ್ಪ-ರಿಣಾಮ ಉಂಟಾಗುತ್ತಿರುವ ಬಗ್ಗೆ ಸ್ಥಳೀಯರು ಆತಂಕ ವ್ಯಕ್ತಪಡಿಸುತ್ತಿದ್ದಾರೆ ಎಂದರು.

ಕೋರ್ಟ್‌ನಲ್ಲಿ ಪ್ರಕರಣ ಬಾಕಿ ಇದ್ದರೂ ಐಜಿ ಪೆಟ್ರೋಕೆಮಿಕಲ್ ಲಿಮಿಟೆಡ್ ಹೆಸರಿನಲ್ಲಿ ಮೈಸೂರು ಪೆಟ್ರೋಕೆಮಿಕಲ್ ಲಿಮಿಟೆಡ್ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸಂಶಯವಿದ್ದು, ಕೂಡಲೇ ಐಜಿ ಕಂಪನಿಯ ಕಾರ್ಯ ಚಟುವಟಿಕೆಗಳ ಬಗ್ಗೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖ ರಾದ ಮಾರುತಿ, ಜಯಶ್ರೀ , ಈರಣ್ಣ, ಷಣ್ಮುಖಪ್ಪ, ಸುರೇಶ ಬಾಬು, ಬಾಬುರಾವ್, ಮಹಿಬೂಬ್ ಕವಾಲಿ, ಇಮ್ರಾನ್ ಬಡೇಸಾಬ್, ಬಾಷಾ ನಾಯ್ಕ, ಗೌಸ್ ಪಾಷಾ, ವೆಂಕಟೇಶ, ಮಂಜುನಾಥ, ಮದುಕೃಷ್ಣ, ಡಿಂಗ್ರಿ ನರಸಪ್ಪ, ಶಾಹಿದ್, ಬಾಬು, ಧರ್ಮರಾಜ್ ಸೇರಿದಂತೆ ಅನೇಕರಿದ್ದರು.

# ದಾಖಲಾತಿ ಆಂದೋಲನ ಜಾಥಾ ಮೂಲಕ

## ಸರ್ಕಾರಿ ಶಾಲೆಗಳ ಮಹತ್ವ ಸಾರಿದ ವಿದ್ಯಾರ್ಥಿಗಳು

ಸಿಬ್ಬಂದಿ ವರ್ಗದವರು ಜಾಥಾದಲ್ಲಿ ಭಾಗವಹಿಸಿದರು. ಡ್ರಮ್ ಬಾರಿಸುತ್ತಾ ಹಾಗೂ ವಿವಿಧ ಘೋಷಣೆಗಳನ್ನು ಕೂಗುತ್ತಾ ಅಸ್ತಿಹಾಳ ಗ್ರಾಮದ ಪ್ರಮುಖ ರಸ್ತೆ ಹಾಗೂ ಓಣಿಗಳಲ್ಲಿ ಮೆರವಣಿಗೆ ನಡೆಸಿ ಸಾರ್ವಜನಿಕರಲ್ಲಿ ಸರ್ಕಾರಿ ಶಾಲೆಗಳ ಬಗ್ಗೆ ಅರಿವು ಮೂಡಿಸಿದರು.

ಜಾಥಾ ವೇಳೆ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯುವ ಉಚಿತ ಸೌಲಭ್ಯಗಳಾದ ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ, ಮೊಟ್ಟೆ, ಬಾಳೆಹಣ್ಣು, ಗ್ರಂಥಾಲಯ, ಉಚಿತ ಕಂಪ್ಯೂಟರ್ ಶಿಕ್ಷಣ, ಪ್ರತಿಭಾ ಕಾರಂಜಿ, ವಿಜ್ಞಾನ ಪ್ರಯೋಗಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸಂಘಗಳ ರಚನೆ, ಶಿಕ್ಷಕರಿಂದ ಗುಣಮಟ್ಟದ ಬೋಧನೆ, ಉತ್ತಮ ಶೌಚಾಲಯ, ಶುದ್ಧಕುಡಿಯುವ ನೀರು, ಆಟದ ಮೈದಾನ, ಕ್ರೀಡಾ ಸಾಮಗಿಗಳು, ವಿವಿಧ ಜಯಂತಿಗಳ ಆಚರಣೆ, ರಾಷ್ಟ್ರೀಯ ಹಬ್ಬಗಳ ಕಾರ್ಯಕ್ರಮಗಳು, ವಿದ್ಯುತ್ ಸೌಲಭ್ಯ, ಉತ್ತಮ ಬೆಂಚ್‌ಗಳ ವ್ಯವಸ್ಥೆ, ಗ್ರೀನ್ ಬೋರ್ಡ್ ಹಾಗೂ ಕಲಿಕೆಗೆ ಪೂರಕವಾದ ಪರಿಸರದ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

ಇದೇ ವೇಳೆ ಶಿಕ್ಷಣ ಇಲಾಖೆಯ ಈ ವರ್ಷದ ಧ್ಯೆಯ ವಾಕ್ಯವಾದ ಉತ್ತಮ ಕಲಿಕೆ ಉಜ್ವಲ ಭವಿಷ್ಯ ಎಂಬ ಸಂದೇಶವನ್ನು ಸಾರಲಾಯಿತು. ನಿಮ್ಮ ಮಕ್ಕಳನ್ನು ಶಾಲೆಗೆ ಕಳಿಸಿ, ಕೂಲಿ ಬಿಡಿಸಿ ಶಾಲೆಗೆ ಕಳಿಸಿ, ಹೆಣ್ಣೊಂದು ಕಲಿತರೆ ಶಾಲೆ ಒಂದು ತೆರೆದಂತೆ ಸೇರಿದಂತೆ ಹಲವು ಘೋಷಣೆಗಳನ್ನು ಕೂಗುವ ಮೂಲಕ ಮಕ್ಕಳ ಶಿಕ್ಷಣದ ಮಹತ್ವವನ್ನು ತಿಳಿಸಲಾಯಿತು.

ಸರ್ಕಾರಿ ಶಾಲೆಗಳಲ್ಲಿ ಮಕ್ಕಳನ್ನು ದಾಖಲಿಸು ವಂತೆ ಪೋಷಕರಿಗೆ ಮನವಿ ಮಾಡುತ್ತಾ ಜಾಥಾ ಮೂಲಕ ಗ್ರಾಮದಲ್ಲಿ ಶಿಕ್ಷಣ ಜಾಗೃತಿ ಮೂಡಿಸಲಾಯಿತು.

ಈ ಸಂದರ್ಭದಲ್ಲಿ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಮುಖ್ಯಗುರು, ಶಿಕ್ಷಕರು ಹಾಗೂ ಶಾಲೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ ಪೂರ್ವಭಾವಿ ಸಭೆ

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶ್ವ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಜೂ.12ರಂದು ಬೆಳಗ್ಗೆ 11ಗಂಟೆಗೆ ಎಲ್ಲಾ ಸರ್ಕಾರಿ ನೌಕರರು ತಮ್ಮ ಕೆಲಸ. ನಿರ್ವಹಿಸುವ ಸ್ಥಳದಲ್ಲಿಯೇ ಒಟ್ಟಾಗಿ ಸೇರಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನ-2026ರ ಅಂಗವಾಗಿ ಪ್ರಮಾಣ ವಚನ ಸ್ವೀಕರಿಸಬೇಕು. ಜೂ.12 ರಂದು ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲೆಯ ಪ್ರತಿ ಗ್ರಾಮ ಪಂಚಾಯತಿ ವತಿಯಿಂದ ಎಲ್ಲಾ ಗ್ರಾಮಗಳಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು, ಬಿಲ್ ಕಲೆಕ್ಟರ್, ಬೀಟ್ ಪೊಲೀಸ್, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು ಹಾಗೂ ಎಲ್ಲಾ ಸಿಬ್ಬಂದಿಗಳು, ಒಟ್ಟಾಗಿ ಸೇರಿ ಕಾರ್ಯಕ್ರಮ ಆಚರಣೆ ಮಾಡಿ ಪ್ರಮಾಣ ವಚನ ಸ್ವೀಕರಿಸುವುದು ಹಾಗೂ ಈ ದಿನದಂದು ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ಬಗ್ಗೆ ಡಂಗೂರ ಸಾರುವುದರ ಮೂಲಕ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಬೇಕು ಎಂದರು.ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ದಿನದ ಕುರಿತು ವೇದಿಕೆಯ ಮೇಲೆ ಪ್ರೌಢ ಶಾಲಾ ಮಕ್ಕಳಿಂದ ಚಿತ್ರಕಲಾ ಪ್ರದರ್ಶನ ಹಾಗೂ ಕಿರು ನಾಟಕ ಪ್ರದರ್ಶನ ಕೈಗೊಂಡು ಜಾಗೃತಿಯನ್ನು ಮಾಡಿಸಬೇಕು. ಅಲ್ಲದೆ ಜಿಲ್ಲೆಯ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ, ಎಲ್ಲಾ ಪಟ್ಟಣ ಪಂಚಾಯತ್‌ಗಳಲ್ಲಿ ಹಾಗೂ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ವಿಶ್ವ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯನ್ನು ಆಚರಿಸಿ, ಪ್ರಮಾಣ ವಚನ ಸ್ವೀಕ-ರಿಸಲು ಮತ್ತು ಕಸ ವಿಲೇವಾರಿ ವಾಹನಗಳಲ್ಲಿ ಉಚಿತವಾಗಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ವಿರೋಧಿ ಕುರಿತು ಜಿಂಗಲ್ಸ್ ಅಥವಾ ಘೋಷಣೆಗಳನ್ನು ಕೂಗಿಸಬೇಕೆಂದು ಸಭೆಯಲ್ಲಿ ಸಹಾಯಕ ಆಯುಕ್ತರು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ರಾಯಚೂರು ಮಹಾನಗರ ಪಾಲಿಕೆಯ ಆಡಳಿತ ವಿಭಾಗದ ಉಪ ಆಯುಕ್ತರಾದ ಸಂತೋಷ ರಾಣಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಕಾರ್ಮಿಕ ಇಲಾಖೆಯ ಜಿಲ್ಲಾ ಕಾರ್ಮಿಕ ಅಧಿಕಾರಿ ಆರತಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ, ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ಪುಷ್ಪ ಲತಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ಕಾರ್ಮಿಕ ಇಲಾಖೆಯ ರಾಯಚೂರು ವೃತ್ತದ ನಿರೀಕ್ಷಕರಾದ ಪ್ರಿಯಾಂಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

## ಶಾಸಕ ದದ್ದಲ ಬಸನಗೌಡರಿಗೆ ಸಚಿವ ಸ್ಥಾನ ನೀಡಿ.

ಏತ ನೀರಾವರಿ, ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ ನಾಮಕರಣ ಸೇರಿ ಕೊಟ್ಯಾಂತರ ಅನುದಾನ ತಂದ ಕ್ಷೇತ್ರದ ಅಭಿವೃದ್ಧಿಯಲ್ಲಿ ಗುರುತಿಸುವಂತೆ ಮಾಡಿದ್ದಾರೆ. ಯುವಕರಿಗೆ ಆದ್ಯತೆ ನೀಡುವಾಗ ಎಸ್‌ಟಿ ಮೀಸಲು ಕ್ಷೇತ್ರದಿಮದ ಆಯ್ಕೆಯಾದ ದದ್ದಲ್ ಬಸನಗೌಡ ಇವರಿಗೆ ಸಚಿವ ಸ್ಥಾನ ನೀಡಿ ಉಸ್ತುವಾರಿ ಸಚಿವರನ್ನಾಗಿಸದರೆ ಜಿಲ್ಲೆಯಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯ ನಡೆಸಲು ಸಾಧ್ಯವಾಗುತ್ತದೆ ಎಂದರು.ಪಂಚ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪವನಕಿಶೋರ ಪಾಟೀಲ್ ಮಾತನಾಡಿ ಚುನಾವಣಾ ವರ್ಷವಾಗಿ ರುವದರಿಂದ ಗ್ರಾಮೀಣ ಶಾಸಕರಿಗೆ ಸಚಿವಸ್ಥಾನ ನೀಡಿದಲ್ಲಿ ಪಕ್ಷ ರಾಜಕೀಯವಾಗಿ ಮತ್ತಷ್ಟು ಬಲಗೊಳ್ಳಲು ಸಹಕಾರಿಯಾಗಲಿದೆ. ನಾಲ್ಕು ವಿಧಾನಸಭಾ ಕ್ಷೇತ್ರಗಳು ಎಸ್‌ಟಿ ಮೀಸಲು ಕ್ಷೇತ್ರಗಳಾಗಿದ್ದು ಎರಡನೇ ಬಾರಿಗೆ ಆಯ್ಕೆಯಾಗಿರುವ ದದ್ದಲ ಬಸನಗೌಡ ಇವರು ಯುವಕರಾಗಿದ್ದರಂದ ಸಚಿವ ಸ್ಥಾನ ನೀಡುವದು ಸೂಕ್ತವಾಗಿದೆ. ಕಳೆದ ಬಾರಿ ಹಿರಿಯರನ್ನು ಗುರುತಿಸಿ ಅಧ್ಯಕ್ಷ ಮಲ್ಲಿಕಾರ್ಜುನಗೌಡ ತಲಮಾರಿ, ಎಸ್‌ಟಿ ಘಟಕದ ಅಧ್ಯಕ್ಷ ಮಲ್ಲಿಕಾರ್ಜುನ ನಾಯಕ, ಸಗಮಕುಂಟಾ ಲಕ್ಷ್ಮಣ, ವೆಂಕಟೇಶ ನಾಯಕ ಮನ್ಸಲಾಪುರು, ಶರಣಪ್ಪ ದಿನ್ನಿ, ಭಾಷಾ ನಾಯ್ಕ, ಬಸವರಾಜ ವಕೀಲ, ಅಶೋಕ, ಈರಣ್ಣ ಸೇರಿ ಅನೇಕರಿದ್ದರು.

## ಎನ್‌ಇಟಿ ಫಾರ್ಮಸಿ ಕಾಲೇಜಿನಲ್ಲಿ ಔಷಧೋದ್ಯಮ

ಬಹುಬೇಗನೆ ತೀವ್ರವಾಗಿ ಅಳವಡಿಸಲಾಗುತ್ತಿದೆ. ಹೀಗಾಗಿ ಸಾಂಪ್ರದಾಯಿಕ ಔಷಧ ಉದ್ಯಮದ ವೃತ್ತಿಗಳ ಸ್ವರೂಪ ಬದಲಾಗುತ್ತಿದೆ. ಅವುಗಳು ಕೃತಿಕ ಬುದ್ದಿಮತ್ತೆ ಪರಿಣಿತ ಔಷಧ ಪದವೀಧರರನ್ನು ನೇಮಿಸಿಕೊಳ್ಳುತ್ತಿದೆ. ಕೃತಕ ಬುದ್ದಿಮತ್ತೆ

ಪರಿಣಿತ ಔಷಧ ಪದವೀಧರರ ಬೇಡಿಕೆ ಹೆಚ್ಚುತ್ತಿದೆ. ಹೀಗಾಗಿ ವಿದ್ಯಾರ್ಥಿಗಳು ತಪ್ಪದೆ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳ ಕುರಿತು ಆಳವಾಗಿ ಅಭ್ಯಾಸಿ ಔಷಧ ಉತ್ಪಾದನಾ, ಔಷಧ ವಿಶ್ಲೇಷಣೆ ಸಂಶೋಧನೆ ಮತ್ತು ಫಾರ್ಮಾ ಪ್ರಾಕ್ಟಿಸ್ ವಿಭಾಗಗಳಲ್ಲಿ ಅವುಗಳಅಳವಡಿಕೆ ಕುರಿತು ತಪ್ಪದೇ ಕಲಿಯಬೇಕೆಂದು ವಿದ್ಯಾರ್ಥಿಗಳಿಗೆ ಒತ್ತಿ ಹೇಳಿದರು. ಅಲ್ಲದೆ ನವೋದಯ ಶಿಕ್ಷಣ ಸಂಸ್ಥೆಯು ಈ ರೀತಿಯ ವಿದ್ಯಾರ್ಥಿಪರ ಕಾರ್ಯಗಾರ ಮತ್ತು ಉಪನ್ಯಾಸ ಕಾರ್ಯಕ್ರಮಗಳನ್ನು ಯಾವತ್ತು ಬೆಂಬಲಿಸುತ್ತದೆ ಎಂದರು.ಅಧ್ಯಕ್ಷತೆಯನ್ನು ವಹಿಸಿದ ಎನ್‌ಇಟಿ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ. ಹೆಚ್ ದೊಡ್ಡಯ್ಯ ಮಾತನಾಡಿ, ಔಷಧ ವಿಜ್ಞಾನಗಳ ತಿಳುವಳಿಕೆಯ ಜೊತೆಗೆ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಗಳನ್ನು ಕಲಿಯುವುದು ಈ ಕಾಲದ ಅವಶ್ಯಕತೆ ಎಂದರು.ಹೈದರಾಬಾದಿನ ಜೆನ್ □□ ಪಯೋನಿಯರ್ ನ ಚೀಫ್ ಎಐ ಆಫೀಸರ್ ಉಮಾ ದೇಶು ಮಾತನಾಡುತ್ತಾ ಈ ಕಾರ್ಯಗಾರದಲ್ಲಿ ಔಷಧೋದ್ಯಮದ ವಿವಿಧ ವಿಭಾಗಗಳಾದ ಔಷಧ ಉತ್ಪಾದನೆ ಔಷದ

ಸಂಶೋಧನೆ ಔಷದ ವಿಶ್ಲೇಷಣೆ, ಕ್ಲಿನಿಕಲ್ ಟ್ರಯಲ್ಸ್ ಫಾರ್ ಮಕೋವಿಜಿಲೆನ್ಸ್, ಡಿಜಿಟಲ್ ಹೆಲ್ತ್ ರೆಗುಲೇಟರಿ ಅಫೇರ್ಸ್ ಮುಂತಾದ ಆರೋಗ್ಯ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಯಾಂತ್ರಿಕ ಬುದ್ಧಿಮತ್ತೆಯ ಬಳಕೆಯ ಕುರಿತು ಪ್ರಾಯೋಗಿಕ ಕೈಯಾರೆ ತರಬೇತಿ ನೀಡಲಾಗುವುದೆಂದರು.ವೇದಿಕೆಯ ಮೇಲೆ ಸಂಸ್ಥೆಯ ಆಡಳಿತ ವಿಭಾಗದ ನಿರ್ದೇಶಕರಾದ ಪ್ರೊಫೆಸರ್ ಸಿ ಸುರೇಶ್ ಬಾಬು, ಮತ್ತು ಕಾರ್ಯಕ್ರಮದ ಸಂಯೋಜಕ ಡಾ. ಸುನಿಲ್ ಕುಮಾರ್ ಬಿ ಉಪಸ್ಥಿತರಿದ್ದರು. ಕು. ಶ್ವೇತಾ ಸ್ವಾಗತಿಸಿದರು. ಕು.ಸ್ಫೂರ್ತಿ ವಂದಿಸಿದರು. ಮಹಮ್ಮದ್ ತೌಫಿಕ್ ಸಂಪನ್ಮೂಲ ವ್ಯಕ್ತಿಯ ಕಿರು ಪರಿಚಯ ನೀಡಿದರು.

## RCB ಮಾಚ್ ಮಧ್ಯೆಯೂ ಕಲೆಗೆ ಜಯ

ನಿರಂತರವಾಗಿ ಸಂವಾದ, ನೃತ್ಯ ಮಾಡಬೇಕು. ಕಲೆಯನ್ನು ಕರಗತ ಮಾಡಿಕೊಳ್ಳುವುದೇ ರಂಗಭೂಮಿ" ಎಂದು ರಂಗಭೂಮಿಯ ಶ್ರೇಷ್ಠತೆಯನ್ನು ವಿವರಿಸಿದರು. ಜ್ಯೋತಿ ಅವರು ಚಿಕ್ಕವರಿದ್ದಾಗಿನಿಂದಲೇ ಈ ಭಾಗದ ನಾಟಕಗಳಲ್ಲಿ ನೃತ್ಯ ಮಾಡಿ ಜನಪ್ರಿಯತೆ ಗಳಿಸಿದ್ದನ್ನು ಅವರು ನೆನಪಿಸಿಕೊಂಡರು.

ದಿವ್ಯ ಸಾನಿಧ್ಯ ವಹಿಸಿದ್ದ ಅಭಿನವ ಶ್ರೀ ಅಭಿನವ ರಾಚೋಟಿ ಶಿವಾಚಾರ್ಯ ಮಹಾಸ್ವಾಮಿಗಳು, ಸೋಮವಾರಪೇಟೆ, ರಾಯಚೂರು, "ಮೊಬೈಲ್-ಟಿವಿ ಪ್ರಭಾವದಿಂದ ನಾಟಕ ನೋಡುವ ಪ್ರವೃತ್ತಿ ಕಡಿಮೆಯಾಗಿದೆ. ಇಂತಹ ಸಂದರ್ಭದಲ್ಲಿ ಖಃ ಪಂದ್ಯದ ನಡುವೆಯೂ ಇಷ್ಟು ಜನ ಬಂದು ಕಲಾವಿದರನ್ನು ಪ್ರೋತ್ಸಾಹಿಸಿದ್ದು ಅಭಿನಂದನಾರ್ಹ. ಮಹಾಂತೇಶ್ ಪಾಟೀಲ್ ಅತ್ತನೂರು ಅವರು ರಂಗಭೂಮಿ ಕಲಾವಿದರಿಗೆ ನಿರಂತರವಾಗಿ ನೆರವಾಗುತ್ತಿದ್ದಾರೆ. ಜ್ಯೋತಿ ಬಳ್ಳಾರಿ ಅವರಿಗೆ ಎಲ್ಲರೂ ಬೆಂಬಲ ನೀಡಬೇಕು" ಎಂದು ಕರೆ ನೀಡಿದರು.ನಂತರ ಸಂಜು ಬಸಯ್ಯ, ಪಲ್ಲವಿ, ದಿವ್ಯ, ಮಂಜು ಗುಳೇದಗುಡ್ಡ ಅವರು ಅಭಿನಯಿಸಿದ "ಹೌದಲೇ ರಂಗಿ, ಉದಲೇನು ಪುಂಗಿ" ನಾಟಕದ ದೃಶ್ಯಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದವು. ವಿಶೇಷವಾಗಿ ಜ್ಯೋತಿ ಬಳ್ಳಾರಿ ಅವರ ಆಕರ್ಷಕ ನೃತ್ಯ ಪ್ರದರ್ಶನಕ್ಕೆ ಸಭಾಂಗಣವೇ ಚಪ್ಪಾಳೆಯ ಮಳೆಯಾಯಿತು. ಉತ್ತರ ಕರ್ನಾಟಕದ ಜನ ರಂಗಭೂಮಿ ಕಲಾವಿದರನ್ನು ಗೌರವಿಸಿ, ಸನ್ಮಾನಿಸಿ, ಬೆಳೆಸುವ ಗುಣವನ್ನು ಈ ಕಾರ್ಯಕ್ರಮ ಮತ್ತೊಮ್ಮೆ ಸಾಬೀತುಪಡಿಸಿತು. ಕಾರ್ಯಕ್ರಮವನ್ನು ಸುರೇಶ್ ಅವರು ನಿರೂಪಿಸಿದರು. ಸಂಚಾಲಕ ಸಂತೋಷ್ ಬಳ್ಳಾರಿ ಸ್ವಾಗತಿಸಿ ವಂದಿಸಿದರು. ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಚಂದ್ರಶೇಖರ ಪಾಟೀಲ್ ಮಿರ್ಜಾಪುರ, ಕನ್ನಡ ಜಾನಪದ ಪರಿಷತ್ತಿನ ವಿಭಾಗೀಯ ಸಂಚಾಲಕ ಡಾ. ಶರಣಪ್ಪ ಗೋನಾಳ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾ ಪ್ರತಿನಿಧಿ ಡಾ. ಶಾಂತಾ ಕುಲಕರ್ಣಿ, ಕನ್ನಡಪರ ಸಂಘಟನೆ ಕರವೇ ಅಧ್ಯಕ್ಷ ಅಶೋಕ್ ಕುಮಾರ್ ಜೈನ್, ಸಮಾಜಸೇವಕ ಗೋಪಾಲಯ್ಯ, ಉದ್ಯಮಿ ವೀರೇಂದ್ರ ಪಾಟೀಲ್, ಕಾಂಗ್ರೆಸ್ ಮಹಿಳಾ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಭಾಗವಹಿಸಿದ್ದರು.

## ಜಿ.ಪಂ ವತಿಯಿಂದ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗೆ ಅರ್ಜಿ ಆಹ್ವಾನ

ರಾಯಚೂರು: ರಾಯಚೂರು ಜಿಲ್ಲೆಯಲ್ಲಿ ಖಾಲಿ ಇರುವ 13 ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರಗಳಿಗೆ ಗ್ರಂಥಾಲಯ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಈ ಹುದ್ದೆಗೆ ಸ್ಥಳೀಯ ಗ್ರಾಮ ಪಂಚಾಯತಿಯ ಸಂಬಂಧಿಸಿದ ಮೀಸಲಾತಿ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ಅರ್ಜಿಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಗಳು ಜಿಲ್ಲಾ ಪಂಚಾಯತಿ ರಾಯಚೂರು ವೆಬ್‌ಸೈಟ್ ವಿಳಾಸ: zpraichur.kar.nic.in ನಲ್ಲಿ ಸಲ್ಲಿಸಬಹುದಾಗಿದೆ.

ಶೈಕ್ಷಣಿಕ ಅರ್ಹತೆ: ದ್ವಿತೀಯ ಪದವಿ ಪೂರ್ವ ಪರೀಕ್ಷೆ (ಪಿಯುಸಿ)ಯಲ್ಲಿ ಉತ್ತೀರ್ಣವಾಗಿರತಕ್ಕದ್ದು, ಮತ್ತು ಸರ್ಟಿಫಿಕೇಶನ್ ಕೋರ್ಸ್ ಇನ್ ಲೈಬ್ರರಿಸೈನ್ಸ್ ನಲ್ಲಿ ಪ್ರಮಾಣ ಪತ್ರ ಪಡೆದಿರತಕ್ಕದ್ದು ಹಾಗೂ ಕನಿಷ್ಠ ಮೂರು ತಿಂಗಳ ಕಂಪ್ಯೂಟರ್ ಕೋರ್ಸ್‌ನಲ್ಲಿ ಉತ್ತೀರ್ಣವಾಗಿರಬೇಕು.

ಆಯ್ಕೆವಿಧಾನ: ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಗಳಿಸಿದ ಗರಿಷ್ಠ ಅಂಕಗಳು/ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ ಎಂದು ಗ್ರಾಮ ಪಂಚಾಯತಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಮೇಲ್ವಿಚಾರಕರ ಆಯ್ಕೆ ಸಮಿತಿಯ ಸದಸ್ಯ ಕಾರ್ಯದರ್ಶಿಗಳು ಆಗಿರುವ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾವನೆ – ಮಾನವ ಜೀವನದ ಆತ್ಮಸ್ವರ

**ವಿಶೇಷ**

ಮಾನವನ ಜೀವನದಲ್ಲಿ ಅತ್ಯಂತ ಸೂಕ್ಷ್ಮವಾದರೂ ಅತ್ಯಂತ ಶಕ್ತಿಯುತವಾದ ಅಂಶವೆಂದರೆ "ಭಾವನೆ". ಮಾತಿಲ್ಲದೆ ಮನಸ್ಸು ಹೇಳುವ ಭಾಷೆ ಭಾವನೆ. ಕಣ್ಣೀರು, ನಗು, ಮೌನ, ಸಂತೋಷ, ದುಃಖ, ಪ್ರೀತಿ, ಕೋಪ, ಕರುಣೆ – ಇವೆಲ್ಲವೂ ಭಾವನೆಗಳ ವಿವಿಧ ರೂಪಗಳು. ಮಾನವನು ಕೇವಲ ಬುದ್ಧಿಯಿಂದ ಬದುಕುವುದಿಲ್ಲ; ಅವನು ಭಾವನೆಗಳಿಂದ ಬದುಕುತ್ತಾನೆ. ಜೀವನದ ಪ್ರತಿಯೊಂದು ಕ್ಷಣವೂ ಯಾವುದೋ ಒಂದು ಭಾವನೆಯ ಸ್ಪರ್ಶದಿಂದಲೇ ಅರ್ಥಪೂರ್ಣವಾಗುತ್ತದೆ.

ಭಾವನೆ ಎಂಬುದು ಮನಸ್ಸಿನ ಪ್ರತಿಕ್ರಿಯೆ. ಹೊರಗಿನ ಘಟನೆಗಳು, ಅನುಭವಗಳು, ಸಂಬಂಧಗಳು ಮತ್ತು ನೆನಪುಗಳು ನಮ್ಮ ಮನಸ್ಸಿನಲ್ಲಿ ಒಂದು ಸ್ಪಂದನೆಯನ್ನು ಹುಟ್ಟಿಸುತ್ತವೆ. ಅದೇ ಭಾವನೆ. ಒಬ್ಬ ತಾಯಿ ತನ್ನ ಮಗುವನ್ನು ನೋಡಿದಾಗ ಉಂಟಾಗುವ ಮಮತೆ, ವಿದ್ಯಾರ್ಥಿ ಪರೀಕ್ಷೆಯಲ್ಲಿ ಜಯಿಸಿದಾಗ ಅನುಭವಿಸುವ ಸಂತೋಷ, ಬಡವನ ನೋವನ್ನು ಕಂಡು ಮನಸ್ಸು ಕರಗುವುದು – ಇವೆಲ್ಲವೂ ಭಾವನೆಗಳ ಪ್ರತಿಫಲಗಳು.

**ಮಾನವ ಸಂಬಂಧಗಳ ಮೂಲವೇ ಭಾವನೆ.** ಪ್ರೀತಿಯಿಲ್ಲದ ಕುಟುಂಬ ಒಣ ಮರದಂತೆ. ತಾಯಿ–ತಂದೆಯ ಪ್ರೀತಿ, ಸಹೋದರರ ಸ್ನೇಹ, ಸ್ನೇಹಿತರ ಆತ್ಮೀಯತೆ – ಇವೆಲ್ಲವೂ ಭಾವನೆಗಳ ಆಧಾರದ ಮೇಲೆ ನಿಂತಿವೆ. ಒಂದು ಸಣ್ಣ ಮಾತು ಕೂಡ ಪ್ರೀತಿಯಿಂದ ಹೇಳಿದರೆ ಹೃದಯ ಗೆಲ್ಲಬಹುದು. ಆದರೆ ಅದೇ ಮಾತು ಕೋಪದಿಂದ ಹೇಳಿದರೆ ನೋವು ಉಂಟಾಗುತ್ತದೆ. ಆದ್ದರಿಂದ ಭಾವನೆಗಳು ನಮ್ಮ ಸಂಬಂಧಗಳನ್ನು ಕಟ್ಟುತ್ತವೆ ಅಥವಾ ಒಡೆಯುತ್ತವೆ.

ಒಮ್ಮೆ ಒಂದು ಹಳ್ಳಿಯಲ್ಲಿ ವೃದ್ಧ ದಂಪತಿ ವಾಸಿಸುತ್ತಿದ್ದರು. ಅವರಿಗೆ ಒಬ್ಬನೇ ಮಗ. ಅವನು ನಗರದಲ್ಲಿ ಕೆಲಸ ಮಾಡುತ್ತಿದ್ದ. ತಿಂಗಳಿಗೆ ಹಣ ಕಳುಹಿಸುತ್ತಿದ್ದರೂ, ಹಲವು ವರ್ಷಗಳಿಂದ ಊರಿಗೆ ಬರಲಿಲ್ಲ. ತಂದೆ–ತಾಯಿ ಹಣಕ್ಕಿಂತ ಮಗನ ಪ್ರೀತಿಯನ್ನು ಬಯಸುತ್ತಿದ್ದರು. ಒಂದು ದಿನ ಆ ಮಗ ಅಚಾನಕ್ ಮನೆಗೆ ಬಂದಾಗ, ವೃದ್ಧ ತಾಯಿ ಕಣ್ಣೀರು ಹಾಕಿ ಮಗನನ್ನು ಅಪ್ಪಿಕೊಂಡಳು. ಆ ಕಣ್ಣೀರಿನಲ್ಲಿ ಅಡಗಿದ್ದ ಭಾವನೆ ಸಾವಿರ ಮಾತುಗಳಿಗಿಂತ ದೊಡ್ಡದು. ಇಲ್ಲಿ ನಾವು ಕಾಣುವುದು – ಪ್ರೀತಿ ಮತ್ತು ಮಮತೆ ಎಂಬ ಭಾವನೆಗಳ ಮಹತ್ವ.

ಭಾವನೆಗಳು ಕೇವಲ ವೈಯಕ್ತಿಕ ಜೀವನದಲ್ಲಷ್ಟೇ ಅಲ್ಲ, ಸಮಾಜ ಜೀವನದಲ್ಲಿಯೂ ಮಹತ್ತರ ಪಾತ್ರವಹಿಸುತ್ತವೆ. ಕರುಣೆ ಮತ್ತು ಸಹಾನುಭೂತಿ ಇರುವ ಸಮಾಜ ಸದೃಢವಾಗಿರುತ್ತದೆ. ಉದಾಹರಣೆಗೆ, ಪ್ರಕೃತಿ ವಿಕೋಪ ಸಂಭವಿಸಿದಾಗ ಅನೇಕರು ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಸಂಕಷ್ಟದಲ್ಲಿರುವವರಿಗೆ ಸಹಾಯ ಮಾಡುತ್ತಾರೆ. ಅವರಿಗೆ ಸಹಾಯ ಮಾಡುವ ಶಕ್ತಿ ಹಣದಿಂದ ಅಲ್ಲ, ಮಾನವೀಯ ಭಾವನೆಯಿಂದ ಬರುತ್ತದೆ.

ಇತಿಹಾಸದಲ್ಲಿಯೂ ಭಾವನೆಗಳ ಪ್ರಭಾವವನ್ನು ನಾವು ನೋಡಬಹುದು. ದೇಶಭಕ್ತಿಯ ಭಾವನೆ ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಪ್ರೇರೇಪಿಸಿತು. ತಮ್ಮ ಜೀವವನ್ನೇ ತ್ಯಾಗ ಮಾಡಲು ಅವರನ್ನು ಪ್ರೇರೇಪಿಸಿದುದು ದೇಶದ ಮೇಲಿನ ಪ್ರೀತಿ. ಸೈನಿಕನು ಗಡಿಯಲ್ಲಿ ನಿಂತು ದೇಶವನ್ನು ಕಾಪಾಡುವುದೂ ಒಂದು ಉನ್ನತ ಭಾವನೆಯ ಫಲವೇ ಆಗಿದೆ.

ಸಾಹಿತ್ಯ ಮತ್ತು ಕಲೆಯ ಹುಟ್ಟಿಗೂ ಭಾವನೆಗಳೇ ಕಾರಣ. ಕವಿ ತನ್ನ ಮನಸ್ಸಿನ ನೋವನ್ನು ಕವನವಾಗಿ ಹೊರಹಾಕುತ್ತಾನೆ. ಸಂಗೀತಗಾರನು ತನ್ನ ಸಂತೋಷವನ್ನು ಸ್ವರಗಳಲ್ಲಿ ಮೂಡಿಸುತ್ತಾನೆ. ಚಿತ್ರಕಾರನು ತನ್ನ ಕನಸುಗಳನ್ನು ಬಣ್ಣಗಳಲ್ಲಿ ತೋರಿಸುತ್ತಾನೆ. ಭಾವನೆಗಳಿಲ್ಲದ ಸಾಹಿತ್ಯವು ಜೀವವಿಲ್ಲದ ದೇಹದಂತೆ. ಕನ್ನಡ ಸಾಹಿತ್ಯದಲ್ಲಿಯೂ ಅನೇಕ ಕವಿಗಳು ಮಾನವ ಭಾವನೆಗಳನ್ನು ಅತೀ ಸುಂದರವಾಗಿ ಚಿತ್ರಿಸಿದ್ದಾರೆ. ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ ಮೊದಲಾದ ಮಹನೀಯರ ಕೃತಿಗಳಲ್ಲಿ ಮಾನವೀಯ ಭಾವನೆಗಳ ಆಳವನ್ನು ಕಾಣಬಹುದು.

ಆದರೆ ಎಲ್ಲಾ ಭಾವನೆಗಳೂ ಸದಾ ಒಳ್ಳೆಯ ಫಲ ನೀಡುವುದಿಲ್ಲ. ಕೋಪ, ಅಸೂಯೆ, ದ್ವೇಷ ಇಂತಹ ನಕಾರಾತ್ಮಕ ಭಾವನೆಗಳು ಜೀವನವನ್ನು ಹಾಳುಮಾಡಬಹುದು. ಕೋಪದ ಹೊತ್ತಿನಲ್ಲಿ ಹೇಳಿದ ಒಂದು ಮಾತು ಜೀವನಪೂರ್ತಿ ನೋವನ್ನು ಉಂಟುಮಾಡಬಹುದು. ಅಸೂಯೆಯಿಂದ ಸ್ನೇಹ ಕಳೆದುಹೋಗಬಹುದು. ಆದ್ದರಿಂದ ಭಾವನೆಗಳನ್ನು ನಿಯಂತ್ರಿಸುವುದು ಅತ್ಯಂತ ಅಗತ್ಯ.

ಒಮ್ಮೆ ಇಬ್ಬರು ಸ್ನೇಹಿತರು ಸೇರಿ ವ್ಯಾಪಾರ ಮಾಡುತ್ತಿದ್ದರು. ಅವರಲ್ಲಿ ಒಬ್ಬನು ಹೆಚ್ಚು ಲಾಭ ಪಡೆದಿದ್ದಾನೆ ಎಂಬ ಅನುಮಾನ ಮತ್ತೊಬ್ಬನಲ್ಲಿ ಮೂಡಿತು. ಆ ಅನುಮಾನ ಅಸೂಯೆಯಾಗಿ, ನಂತರ ದ್ವೇಷವಾಗಿ ಬದಲಾಯಿತು. ಕೊನೆಗೆ ಅವರ ಸ್ನೇಹ ಮುರಿದುಹೋಯಿತು. ಕೆಲ ವರ್ಷಗಳ ನಂತರ ಸತ್ಯ ತಿಳಿದಾಗ ಅವನು ಪಶ್ಚಾತ್ತಾಪಪಟ್ಟರೂ, ಕಳೆದುಹೋದ ಸ್ನೇಹವನ್ನು ಮರಳಿ ಪಡೆಯಲು ಸಾಧ್ಯವಾಗಲಿಲ್ಲ. ಈ ಘಟನೆ ನಕಾರಾತ್ಮಕ ಭಾವನೆಗಳ ಅಪಾಯವನ್ನು ನಮಗೆ ತಿಳಿಸುತ್ತದೆ.

ಭಾವನೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವನ್ನೇ ಭಾವನಾತ್ಮಕ ಬುದ್ಧಿಮತ್ತೆ ಎಂದು ಕರೆಯುತ್ತಾರೆ. ಇದು ಇಂದಿನ ಕಾಲದಲ್ಲಿ ಅತ್ಯಂತ ಮುಖ್ಯವಾದ ಗುಣವಾಗಿದೆ. ಓದು, ಜ್ಞಾನ, ಹಣ ಇದ್ದರೂ, ಇತರರ ಭಾವನೆಗಳನ್ನು ಅರ್ಥಮಾಡಿಕೊಳ್ಳದ ವ್ಯಕ್ತಿ ಉತ್ತಮ ಸಂಬಂಧಗಳನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಒಬ್ಬ ಉತ್ತಮ ನಾಯಕನಿಗೆ ಕೇವಲ ಬುದ್ಧಿಶಕ್ತಿ ಸಾಕಾಗುವುದಿಲ್ಲ; ಜನರ ನೋವು, ಸಂತೋಷ, ಆಶೆಗಳು ಎಲ್ಲವನ್ನೂ ಅರ್ಥಮಾಡಿಕೊಳ್ಳುವ ಮನಸ್ಸು ಬೇಕು.

ಶಾಲೆಯಲ್ಲಿಯೂ ಭಾವನೆಗಳ ಪಾತ್ರ ಮಹತ್ವದ್ದು. ಶಿಕ್ಷಕನು ವಿದ್ಯಾರ್ಥಿಯನ್ನು ಪ್ರೀತಿಯಿಂದ ಮಾರ್ಗದರ್ಶನ ಮಾಡಿದರೆ, ವಿದ್ಯಾರ್ಥಿ ಆತ್ಮವಿಶ್ವಾಸದಿಂದ ಬೆಳೆಯುತ್ತಾನೆ. ಆದರೆ ಅವಮಾನ ಮತ್ತು ಭಯದಿಂದ ಶಿಕ್ಷಣ ನೀಡಿದರೆ, ವಿದ್ಯಾರ್ಥಿಯ ಮನಸ್ಸು ಕುಗ್ಗುತ್ತದೆ. ಒಂದು ಪ್ರೋತ್ಸಾಹದ ಮಾತು ವಿದ್ಯಾರ್ಥಿಯ ಜೀವನವನ್ನೇ ಬದಲಾಯಿಸಬಹುದು.

ಕುಟುಂಬ ಜೀವನದಲ್ಲಿಯೂ ಭಾವನೆಗಳು ಅತಿ ಮುಖ್ಯ. ಇಂದಿನ ಯಾಂತ್ರಿಕ ಜೀವನದಲ್ಲಿ ಜನರು ಹಣ ಸಂಪಾದನೆಗೆ ಹೆಚ್ಚು ಮಹತ್ವ ಕೊಡುತ್ತಿದ್ದಾರೆ. ಆದರೆ ಕುಟುಂಬ ಸದಸ್ಯರೊಂದಿಗೆ ಸಮಯ ಕಳೆಯಲು ಮರೆತುಬಿಡುತ್ತಿದ್ದಾರೆ. ಮಕ್ಕಳು ಪೋಷಕರ ಪ್ರೀತಿಯನ್ನು ಬಯಸುತ್ತಾರೆ; ವೃದ್ಧರು ಆತ್ಮೀಯತೆಯನ್ನು ಬಯಸುತ್ತಾರೆ. ಹಣವು ಸೌಕರ್ಯ ಕೊಡಬಹುದು, ಆದರೆ ಭಾವನಾತ್ಮಕ ಬೆಂಬಲವೇ ನಿಜವಾದ ಸಂತೋಷವನ್ನು ನೀಡುತ್ತದೆ.

ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಮಾನವ ಸಂಬಂಧಗಳಲ್ಲಿ ಬದಲಾವಣೆ ಉಂಟಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಸಾವಿರಾರು ಸ್ನೇಹಿತರು ಇದ್ದರೂ, ಮನಸ್ಸಿನ ಮಾತು ಹೇಳಿಕೊಳ್ಳಲು ಒಬ್ಬ ನಿಜವಾದ ವ್ಯಕ್ತಿ ಇಲ್ಲದ ಪರಿಸ್ಥಿತಿ ಉಂಟಾಗಿದೆ. ಜನರು ಭಾವನೆಗಳನ್ನು ಹಂಚಿಕೊಳ್ಳುವುದಕ್ಕಿಂತ, ಅವುಗಳನ್ನು ಮರೆಮಾಚಲು ಹೆಚ್ಚು ಪ್ರಯತ್ನಿಸುತ್ತಿದ್ದಾರೆ. ಇದರಿಂದ ಒಂಟಿತನ, ಆತಂಕ ಮತ್ತು ಮಾನಸಿಕ ಒತ್ತಡ ಹೆಚ್ಚುತ್ತಿದೆ. ಆದ್ದರಿಂದ ನಿಜವಾದ ಮಾನವೀಯ ಸಂಬಂಧಗಳನ್ನು ಉಳಿಸಿಕೊಳ್ಳುವುದು ಬಹಳ ಅಗತ್ಯ.

ಭಾವನೆಗಳು ನಮ್ಮ ನಿರ್ಧಾರಗಳ ಮೇಲೂ ಪರಿಣಾಮ ಬೀರುತ್ತವೆ. ಸಂತೋಷದಲ್ಲಿರುವಾಗ ನಾವು ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳಬಹುದು; ಕೋಪದಲ್ಲಿರುವಾಗ ತಪ್ಪು ನಿರ್ಧಾರಗಳನ್ನು ಮಾಡಬಹುದು. ಆದ್ದರಿಂದ ಯಾವುದೇ ಮಹತ್ವದ ನಿರ್ಧಾರವನ್ನು ತೆಗೆದುಕೊಳ್ಳುವ ಮುನ್ನ ಮನಸ್ಸನ್ನು ಶಾಂತಗೊಳಿಸಬೇಕು.

ಒಬ್ಬ ರೈತ ತನ್ನ ಬೆಳೆದ ಬೆಳೆ ನಾಶವಾದಾಗ ತುಂಬಾ ದುಃಖಪಟ್ಟ. ಆದರೆ ಆತ ಧೈರ್ಯ ಕಳೆದುಕೊಳ್ಳಲಿಲ್ಲ. ಮತ್ತೆ ಶ್ರಮಪಟ್ಟು ಮುಂದಿನ ವರ್ಷ ಉತ್ತಮ ಬೆಳೆ ಪಡೆದ. ಇಲ್ಲಿ ನಾವು ನೋಡುವುದು – ದುಃಖದ ಭಾವನೆಯ ಜೊತೆಗೆ ಆಶಾವಾದದ ಭಾವನೆಯೂ ಮಾನವನನ್ನು ಮುಂದೆ ನಡೆಸುತ್ತದೆ.

ಭಾವನೆಗಳು ಮಾನವನನ್ನು ಮನುಷ್ಯನನ್ನಾಗಿಸುತ್ತವೆ. ಯಂತ್ರಗಳಿಗೆ ಜ್ಞಾನ ಇರಬಹುದು, ಆದರೆ ಭಾವನೆಗಳಿಲ್ಲ. ಮನುಷ್ಯನು ಅಳುತ್ತಾನೆ, ನಗುತ್ತಾನೆ, ಪ್ರೀತಿಸುತ್ತಾನೆ, ಕರುಣೆ ತೋರಿಸುತ್ತಾನೆ – ಇದೇ ಅವನ ವೈಶಿಷ್ಟ್ಯ. ಆದ್ದರಿಂದ ಭಾವನೆಗಳನ್ನು ದುರ್ಬಲತೆ ಎಂದು ನೋಡುವುದಕ್ಕಿಂತ, ಅವು ಮಾನವೀಯತೆಯ ಚಿಹ್ನೆ ಎಂದು ಅರ್ಥಮಾಡಿಕೊಳ್ಳಬೇಕು.

ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸಲು ಉತ್ತಮ ಭಾವನೆಗಳ ಅಗತ್ಯವಿದೆ. ಪ್ರೀತಿ, ಸಹಾನುಭೂತಿ, ಕರುಣೆ, ಸಹನೆ ಇವುಗಳನ್ನು ಬೆಳೆಸಿದರೆ ಸಮಾಜ ಸುಂದರವಾಗುತ್ತದೆ. ದ್ವೇಷ, ಅಸೂಯೆ, ಹಿಂಸೆ ಇವುಗಳನ್ನು ತೊರೆದು ಮಾನವೀಯತೆ ಬೆಳೆಸಿದಾಗ ಮಾತ್ರ ನಿಜವಾದ ಅಭಿವೃದ್ಧಿ ಸಾಧ್ಯ.

ಒಟ್ಟಿನಲ್ಲಿ, ಭಾವನೆಗಳು ಮಾನವ ಜೀವನದ ಆಧಾರಸ್ತಂಭಗಳು. ಅವು ನಮ್ಮ ಸಂಬಂಧಗಳನ್ನು ರೂಪಿಸುತ್ತವೆ, ನಮ್ಮ ನಿರ್ಧಾರಗಳನ್ನು ಪ್ರಭಾವಿಸುತ್ತವೆ ಮತ್ತು ನಮ್ಮ ಜೀವನಕ್ಕೆ ಅರ್ಥ ನೀಡುತ್ತವೆ. ಭಾವನೆಗಳಿಲ್ಲದ ಜೀವನ ಬಣ್ಣವಿಲ್ಲದ ಚಿತ್ರವಂತೆ. ಆದ್ದರಿಂದ ನಾವು ನಮ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು, ಅವುಗಳನ್ನು ಸರಿಯಾಗಿ ವ್ಯಕ್ತಪಡಿಸಬೇಕು ಮತ್ತು ಇತರರ ಭಾವನೆಗಳಿಗೆ ಗೌರವ ನೀಡಬೇಕು. ಆಗ ಮಾತ್ರ ಜೀವನ ಸುಂದರ, ಸಾರ್ಥಕ ಮತ್ತು ಸಂತೋಷಕರವಾಗುತ್ತದೆ..

–ಡಾ. ರವಿರಾಜು ಡಿ,
ಸಹಾಯಕ ಪ್ರಾಧ್ಯಾಪಕರು, ರಾಯಚೂರು



## ರಸಗೊಬ್ಬರ ನಿಯಮ ಉಲ್ಲಂಘನೆ : ಮುದಗಲ್ ಅಂಗಡಿಗೆ ಸಹಾಯಕ ಕೃಷಿ ನಿರ್ದೇಶಕಿ ದಿಢೀರ್ ಭೇಟಿ, ಪರವಾನಿಗೆ ರದ್ದಿಗೆ ನೋಟಿಸ್



ಮುದಗಲ್ : ಫಲಕ ಪ್ರದರ್ಶನವಿಲ್ಲ, ಬಿಲ್ಲಿನಲ್ಲಿ ರೈತರ ಸಹಿ ಇಲ್ಲ, ಡಿಎಪಿ ಜತೆ ಬಲವಂತದ ಮಾರಾಟ – ಹೀಗೆ ರಸಗೊಬ್ಬರ ನಿಯಂತ್ರಣ ಕಾಯ್ದೆ 1985ರ ಹಲವು ನಿಯಮಗಳನ್ನು ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಲಿಂಗಸ್ಗೂರು ತಾಲ್ಲೂಕಿನ ಮುದಗಲ್ ಪಟ್ಟಣದ ಬದ್ರಿನಾಥ ಬೀಜ ಮತ್ತು ರಸಗೊಬ್ಬರ ಮಾರಾಟ ಅಂಗಡಿಗೆ ಲಿಂಗಸ್ಗೂರು ಸಹಾಯಕ ಕೃಷಿ ನಿರ್ದೇಶಕಿ ವಿಜಯಾಮೂರ್ತಿ ಅವರು ಗುರುವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪರಿಶೀಲನೆಯ ವೇಳೆ ಅಂಗಡಿ ಮಾರಾಟಗಾರರು ಪ್ರತಿ ತಿಂಗಳ 5ನೇ ದಿನಾಂಕದೊಳಗೆ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರ ಕಚೇರಿಗೆ ಆ ತಿಂಗಳ ರಸಗೊಬ್ಬರಗಳ ಆರಂಭಿಕ ಶೇಖರ ಮತ್ತು ಮಾರಾಟದ ಶೇಖರದ ವಿವರ ಸಲ್ಲಿಸಿರುವುದು ಕಂಡುಬಂದಿಲ್ಲ. ನಿಗದಿತ ದರ್ಜೆಯಲ್ಲದ ರಸಗೊಬ್ಬರಗಳನ್ನು ದಾಸ್ತಾನು ಮಾಡಿರುವುದು, ಬಿಲ್ಲು ಪುಸ್ತಕದಲ್ಲಿ ರೈತರ ಸಹಿ ಪಡೆಯದೆ ಮಾರಾಟ ಮಾಡಿರುವುದು, ಡಿಎಪಿ ಜತೆಗೆ ಇತರೆ ರಸಗೊಬ್ಬರಗಳನ್ನು ಕಡ್ಡಾಯವಾಗಿ ಮಾರಾಟ ಮಾಡಿರುವುದು ಕಂಡುಬಂದಿದೆ.

ಇದರ ಜತೆಗೆ ಅಂಗಡಿಯಲ್ಲಿ ಮಾರಾಟಕ್ಕೆ ಇರಿಸಿರುವ ರಸಗೊಬ್ಬರಗಳ ದಾಸ್ತಾನು ವಿವರ ಹಾಗೂ ಗರಿಷ್ಠ ಚಿಲ್ಲರೆ ದರವನ್ನು ಸಾರ್ವಜನಿಕರಿಗೆ ಗೋಚರಿಸುವಂತೆ ಪ್ರಮುಖ ಸ್ಥಳದಲ್ಲಿ ಫಲಕದ ಮೂಲಕ ಪ್ರದರ್ಶಿಸಿಲ್ಲ. ರೈತರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಈ ದಿಢೀರ್ ತಪಾಸಣೆ ಕೈಗೊಳ್ಳಲಾಗಿದೆ ಎಂದು ಕೃಷಿ ಅಧಿಕಾರಿಗಳು ತಿಳಿಸಿದರು.

ರಸಗೊಬ್ಬರ ನಿಯಂತ್ರಣ ಕಾಯ್ದೆ 1985ರ ನಿಯಮಗಳನ್ನು ಗಂಭೀರವಾಗಿ ಉಲ್ಲಂಘಿಸಿರುವುದರಿಂದ ನೀಡಿರುವ ರಸಗೊಬ್ಬರ ಮಾರಾಟ ಪರವಾನಿಗೆಯನ್ನು ರದ್ದುಪಡಿಸುವುದು ಅನಿವಾರ್ಯ ಎಂದು ಪ್ರಾಥ'ಮಿಕವಾಗಿ ಕಂಡುಬಂದ ಹಿನ್ನೆಲೆಯಲ್ಲಿ ಸಂಬಂಧಿಸಿದ ಅಂಗಡಿಗೆ ನೋಟಿಸ್ ಜಾರಿ ಮಾಡಲಾಗಿದೆ. 3 ದಿನಗಳೊಳಗೆ ಲಿಖಿತ ಸಮಜಾಯಿಷಿ ನೀಡಬೇಕು. ಸಮರ್ಪಕ ಉತ್ತರ ನೀಡದಿದ್ದಲ್ಲಿ ಪರವಾನಿಗೆ ರದ್ದು ಸೇರಿದಂತೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕಿ ವಿಜಯಾಮೂರ್ತಿ ಎಚ್ಚರಿಸಿದರು.

ಕೃಷಿ ಇಲಾಖೆ ಅಧಿಕಾರಿಗಳಾದ ಅಮರೇಗೌಡ, ಶ್ರೀಶೈಲ ಬೋವಿ ಸೇರಿದಂತೆ ಇತರರು ಈ ವೇಳೆ ಉಪಸ್ಥಿತರಿದ್ದರು.

## ಎಲ್ಲಾ ಮಕ್ಕಳೂ ಶಾಲೆಗೆ" – ಖೈರವಾಡಗಿಯಲ್ಲಿ ವಜ್ಜಲ್‌ರಿಂದ ಪ್ರಾರಂಭೋತ್ಸವ, ಸಮವಸ್ತ್ರ–ಪುಸ್ತಕ ವಿತರಣೆ



ಮುದಗಲ್ : ಸರಕಾರದ "ಎಲ್ಲಾ ಮಕ್ಕಳೂ ಶಾಲೆಗೆ" ಅಭಿಯಾನಕ್ಕೆ ಮುದಗಲ್ ತಾಲೂಕಿನಲ್ಲಿ ಸೋಮವಾರ ಚಾಲನೆ ದೊರೆಯಿತು. ಲಿಂಗಸುಗೂರು ವಿಧಾನಸಭಾ ಕ್ಷೇತ್ರದ ಶಾಸಕ ಮಾನಪ್ಪ ವಜ್ಜಲ್ ಅವರು ಮುದಗಲ್ ಸಮೀಪದ ಖೈರವಾಡಗಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ 2026–27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಹಾಗೂ ದಾಖಲಾತಿ ಆಂದೋಲನ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಶಾಸಕ ವಜ್ಜಲ್, ರಾಜ್ಯ ಸರಕಾರವು ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಆದ್ಯತೆ ನೀಡುತ್ತಿದೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಸೇರಿದಂತೆ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ, ಉತ್ತಮ ಶಿಕ್ಷಣ ನೀಡಿ ಸಮಾಜಮುಖಿ ನಾಗರಿಕರನ್ನಾಗಿ ರೂಪಿಸಬೇಕು ಎಂದು ಕರೆ ನೀಡಿದರು.

ಉದ್ಘಾಟನೆ ಬಳಿಕ ಶಾಸಕರು ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ವಿತರಿಸಿ ಶುಭ ಹಾರೈಸಿದರು. "ಶಿಕ್ಷಣವೇ ಸಮಾಜದ ಬೆಳವಣಿಗೆಗೆ ಮೂಲಾಧಾರ. ಸರಕಾರದ ಯೋಜನೆಗಳು ಬಡ ಮಕ್ಕಳ ಕಲಿಕೆಗೆ ಬಲ ತುಂಬಲಿವೆ" ಎಂದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹೂನೂರು, ಲಿಂಗಸುಗೂರು ಬಿಜೆಪಿ ಮಂಡಲ ಅಧ್ಯಕ್ಷ ಕೆ ನಾಗಭೂಷಣ, ಸಿರ್ಸಿ ವಿಜಯಕುಮಾರ ಮೇಟಿ, ಬಿಜೆಪಿ ಮುದಗಲ್ ಮಂಡಲ್ ಅಧ್ಯ ವ ಕರಿಯಪ್ಪ ಯಾದವ, ಮುಖಂಡರಾದ ಗಿರಿಮಲ್ಲನಗೌಡ ಕರಡಕಲ್, ಅಯ್ಯಪ್ಪ ಮಾಳೂರು, ಮಲ್ಲಪ್ಪ ಮಾಟೂರು, ಕೆರಿಯಪ್ಪ ಗೋಡಿ, ನಾಗರಾಜ ತಳವಾರ, ಉದಯಕುಮಾರ ಕಮ್ಮಾರ, ಶರಣಬಸವ ಮರೋಳ, ವೆಂಕಟೇಶ ನಾಯಕ ಸೇರಿದಂತೆ ಶಾಲಾ ಮುಖ್ಯಗುರುಗಳು ಹಾಗೂ ಪಾಲಕರು ಉಪಸ್ಥಿತರಿದ್ದರು.

## ಹಟ್ಟಿ ಚಿನ್ನದ ಗಣಿ: 2ನೇ ಹಂತದ ಹೋರಾಟ ಆರಂಭ, ಕಪ್ಪು ಬಾವುಟದೊಂದಿಗೆ ಕಾರ್ಮಿಕರ ಪ್ರತಿಭಟನೆ



ಹಟ್ಟಿ : ಹಟ್ಟಿ ಚಿನ್ನದ ಗಣಿ ಕಾರ್ಮಿಕರ ಬಹುದಿನದ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಡೆಯುತ್ತಿರುವ ಹೋರಾಟ ತೀವ್ರಗೊಂಡಿದೆ. ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮಂಗಳವಾರ 2ನೇ ಹಂತದ ಪ್ರತಿಭಟನೆಗೆ ಚಾಲನೆ ನೀಡಲಾಯಿತು.

ಕಪ್ಪು ಪಟ್ಟಿ ಧರಿಸಿದ ನೂರಾರು ಕಾರ್ಮಿಕರು ಕಪ್ಪು ಬಾವುಟಗಳನ್ನು ಹಿಡಿದು ಗಣಿ ಆಡಳಿತ ಮಂಡಳಿಯ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೆಲಸ ಸ್ಥಗಿತಗೊಳಿಸದೆ ಸಾಂಕೇತಿಕ ಪ್ರತಿಭಟನೆಯ ಮೂಲಕ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು.ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕಾರ್ಮಿಕ ಮುಖಂಡರು, ಆಡಳಿತ ಮಂಡಳಿ ಕಾರ್ಮಿಕರ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಹೋರಾಟ ಹಮ್ಮಿಕೊಳ್ಳುವುದಾಗಿ ಎಚ್ಚರಿಕೆ ನೀಡಿದರು. ನ್ಯಾಯಯುತ ಬೇಡಿಕೆಗಳು ಈಡೇರುವವರೆಗೆ ಹೋರಾಟ ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಇತ್ತೀಚೆಗೆ ಗಣಿಯ ಉತ್ಪಾದನೆ ಹೆಚ್ಚಳವಾಗುತ್ತಿದ್ದರೂ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳಲ್ಲಿ ಮಾತ್ರ ತಾರತಮ್ಯವಾಗುತ್ತಿದೆ ಎಂದು ಕಾರ್ಮಿಕರು ದೂರಿದರು. ಕಳೆದ ಹಲವು ಸುತ್ತಿನ ಮಾತುಕತೆಗಳು ವಿಫಲವಾದ ಹಿನ್ನೆಲೆಯಲ್ಲಿ ಈಗ ಕಪ್ಪು ಬಾವುಟದ ಹೋರಾಟಕ್ಕೆ ಮುಂದಾಗಿದ್ದಾರೆ.ಈ ಸಂದರ್ಭದಲ್ಲಿ ಸಿಬ್ಬಂದಿ ಮತ್ತು ಕಾರ್ಮಿಕ ಸಂಘದ ಕಾರ್ಯದರ್ಶಿಗಳಾದ ವೆಂಕೋಬ್ ಮಿಯ್ಯಾಪೂರು, ಗೌಸ್ ಮಿಯಾ, ರಮೇಶ ಬಾಬು, ನಾಗರಾಜ್, ಹನೀಫ್, ಸಿದ್ದಪ್ಪ ಮುಂಡರಗಿ, ಚಂದ್ರಶೇಖರ್ ನೆಲೋಗಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಬಾಬು ಸಾಗರ್, ಮುನೀರುದ್ದೀನ್, ಹನುಮಂತಗೌಡ, ಗುಂಡಪ್ಪ, ಗುರುರಾಜ್, ಅಮರೇಶ ವಿಲ್ಲೇಜ್ ಶಾಪ್, ಸಿಐಟಿಯು ಜಿಲ್ಲಾ ಸಮಿತಿ ಜಂಟಿ ಕಾರ್ಯದರ್ಶಿ ರಮೇಶ ವೀರಾಪೂರು, ಮೌನುದ್ದೀನ್, ಎಐಟಿಯುಸಿ ಸಂಗಯ್ಯಸ್ವಾಮಿ, ಫಕ್ರುದ್ದೀನ್, ಪೆಂಚಲಯ್ಯ, ಸೋಮಣ್ಣ ನಾಯಕ್, ರಾಜೇಶ್ವರಿ, ಹನುಮಂತ್ರಾಯ, ಹುಸೇನ್ ಬಾಷಾ, ಬಸವರಾಜ್ ಎಂ.ಎಂ., ಶ್ರೀಧರ್, ಅಲ್ಲಾಭಕ್ಷ, ಯಮನೂರು, ಖಾಜಾ ಸೇರಿದಂತೆ ಸಿಐಟಿಯು, ಎಐಟಿಯುಸಿ, ಆಕಳು ಪಕ್ಷದ ಅನೇಕರು ಉಪಸ್ಥಿತರಿದ್ದರು.

## ಗೊಲ್ಲದಿನ್ನಿ ಶಾಲೆಯಲ್ಲಿ ಶಿಕ್ಷಕರ ಕೊರತೆ : 4 ಅತಿಥಿ ಶಿಕ್ಷಕರ ನೇಮಕ, ನಾಗರಾಜ ಹೆಚ್ ವರ್ಗಾವಣೆ ರದ್ದು ಕೋರಿ ಗ್ರಾಮಸ್ಥರ ಆಗ್ರಹ



ಮಾನ್ವಿ : ಶಾಲಾ ಮಕ್ಕಳ ಭವಿಷ್ಯ ದೃಷ್ಟಿಯಿಂದ ಸ.ಹಿ.ಪ್ರಾ.ಶಾಲೆ ಗೊಲ್ಲದಿನ್ನಿಗೆ ತಕ್ಷಣ 4 ಅತಿಥಿ ಶಿಕ್ಷಕರನ್ನು ನೇಮಿಸಬೇಕು. ವರ್ಗಾವಣೆಗೊಂಡಿರುವ ಸಹ ಶಿಕ್ಷಕ ನಾಗರಾಜ ಹೆಚ್ ಅವರನ್ನು ಮರಳಿ ಈ ಶಾಲೆಗೆ ಕರೆಸಿಕೊಳ್ಳಬೇಕು ಎಂದು ವಿಜಯ ಕರ್ನಾಟಕ ರಕ್ಷಣಾ ವೇದಿಕೆ ಗ್ರಾಮ ಘಟಕ ಗೊಲ್ಲದಿನ್ನಿ ಹಾಗೂ ಗ್ರಾಮಸ್ಥರು, ಗ್ರಾಮ ಪಂಚಾಯತಿ ಪ್ರತಿನಿಧಿಗಳು ಮತ್ತು ಎಸ್.ಡಿ.ಎಂ.ಸಿ ಸಮಿತಿಯವರು ಶಿಕ್ಷಣಾಧಿಕಾರಿಗಳಿಗೆ ಮನವಿ ಮಾಡಿದ್ದಾರೆ.ಪ್ರಸ್ತುತ ಶಾಲೆಯಲ್ಲಿ ಇಬ್ಬರು ಸಹ ಶಿಕ್ಷಕರು ಹಾಗೂ ಇಬ್ಬರು ಅತಿಥಿ ಶಿಕ್ಷಕರು ಸೇರಿ ಒಟ್ಟು 4 ಜನ ಶಿಕ್ಷಕರಿದ್ದಾರೆ. ಎಲ್.ಕೆ.ಜಿ, ಯು.ಕೆ.ಜಿ ಸೇರಿದಂತೆ 1ನೇ ತರಗತಿಯಿಂದ 7ನೇ ತರಗತಿಯವರೆಗಿನ ಮಕ್ಕಳಿಗೆ ಬೋಧಿಸಲು ಇದು ಸಾಲುತ್ತಿಲ್ಲ. ಪ್ರತಿ ಶಿಕ್ಷಕರಿಗೆ 2–3 ತರಗತಿ ಹೊರೆ ಬಿದ್ದು, ಸರಿಯಾದ ಪಠ್ಯ ಬೋಧನೆ ಸಾಧ್ಯವಾಗುತ್ತಿಲ್ಲ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಅನುಪಾತ ತೀರಾ ಕಡಿಮೆಯಾಗಿದೆ.ಈ ಹಿನ್ನೆಲೆಯಲ್ಲಿ ಗ್ರಾಮದ ಸಂಘಟನೆ ಮುಖಂಡರು ಮತ್ತು ಎಸ್.ಡಿ.ಎಂ.ಸಿ ಸದಸ್ಯರು ಶಿಕ್ಷಣ ಇಲಾಖೆಯ ಗಮನ ಸೆಳೆಯಲು ಮುಂದಾಗಿದ್ದಾರೆ. ಕೂಡಲೇ 4 ಅತಿಥಿ ಶಿಕ್ಷಕರನ್ನು ನೇಮಿಸಬೇಕು. ಇತ್ತೀಚೆಗೆ ಸಹ ಶಿಕ್ಷಕರನ್ನು ಮತ್ತೆ ಗೊಲ್ಲದಿನ್ನಿ ಶಾಲೆಗೆ ನಿಯೋಜಿಸಬೇಕು ಎಂದು ಒತ್ತಾಯಿಸಿದ್ದಾರೆ.ಬೇಡಿಕೆ ಈಡೇರದಿದ್ದರೆ ವಿಜಯ ಕರ್ನಾಟಕ ರಕ್ಷಣ ವೇದಿಕೆ ಗ್ರಾಮ ಘಟಕ ಗೊಲ್ಲದಿನ್ನಿ, ಊರಿನ ಗ್ರಾಮಸ್ಥರು ಶಾಲೆಗೆ ಬೀಗ ಜಡಿದು ಅನಿರ್ದಿಷ್ಟಾವಧಿ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ಶಿಕ್ಷಣ ಇಲಾಖೆ ತಕ್ಷಣ ಸ್ಪಂದಿಸಿ ಶಿಕ್ಷಕರ ಕೊರತೆ ನೀಗಿಸಬೇಕು ಎಂಬುದು ಗ್ರಾಮದ ಒಕ್ಕೊರಲ ದನಿಯಾಗಿದೆ. ಎಲ್.ಕೆ.ಜಿ ಯಿಂದ 7ನೇ ತರಗತಿವರೆಗೆ ಸುಗಮ ಬೋಧನೆಗೆ ಅನುವು ಅನುಭವಿ ಸಹ ಶಿಕ್ಷಕರನ್ನು ಮರಳಿ ಶಾಲೆಗೆ ಕರೆತರಲು ಗ್ರಾಮಸ್ಥರ ಈ ಮನವಿಗೆ ಶಿಕ್ಷಣಾಧಿಕಾರಿಗಳು ಯಾವ ರೀತಿ ಸ್ಪಂದಿಸುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯಧ್ಯಕ್ಷರಾದ ಆನಂದಸ್ವಾಮಿ ಹಿರೇಮಠ, ಜಿಲ್ಲಾ ಉಪಾಧ್ಯಕ್ಷರಾದ ಚನ್ನಬಸವ ಗೊಲ್ಲದಿನ್ನಿ, ಗ್ರಾಮ ಘಟಕ ಅಧ್ಯಕ್ಷ ರೇಣುಕಾ ರಾಜ,ಉಪಾಧ್ಯಕ್ಷ ಸಾಬಣ್ಣ, ಎಸ್ ಡಿ ಎಂ ಸಿ ಅಧ್ಯಕ್ಷರಾದ ನಂದಪ್ಪ ಹಳ್ಳಿ, ಗ್ರಾಮಸ್ಥರಾದ ಕರಿಯಪ್ಪ , ಹನುಮೇಶ, ಸೋಮನಾಥ, ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದಿಂದ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ



ಮಾನ್ವಿ: ಪಟ್ಟಣದ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘದ ವತಿಯಿಂದ ನಡೆದ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಚಾರ್ಯ ಮಹಾಸ್ವಾಮಿಗಳು ಆರ್ಶೀವಚನ ನೀಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ಜೀವನವನ್ನು ರೂಪಿಸಿಕೊಳ್ಳುವುದಕ್ಕೆ ಶಿಕ್ಷಣದಿಂದ ಮಾತ್ರ ಸಾಧ್ಯವಿದು ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತವಾದ ಗು-ರಿಯನ್ನಿಟ್ಟುಕೊಂಡು ನಿರಂತರ ಶ್ರಮದಿಂದ ಅಭ್ಯಾಸ ಮಾಡದಲ್ಲಿ ಮಾತ್ರ ಉತ್ತಮ ಅಂಕಗಳನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತಿದೆ.ವಿದ್ಯಾರ್ಥಿಗಳು ಶಿಕ್ಷಣದ ಜೋತೆಗೆ ಸಂಸ್ಕಾರ, ಮೌಲ್ಯಗಳನ್ನು ಹೊಂದಿದಾಗ ಮಾತ್ರ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗುವುದಕ್ಕೆ ಸಾಧ್ಯ ಶ್ರೀ ನಗರೇಶ್ವರ ಆರ್ಯವೈಶ್ಯ ಸಂಘವು ಆರ್ಯವೈಶ್ಯ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವನ್ನುನೀಡುವ ಉದ್ದೇಶದಿಂದ ಹಲವು ವರ್ಷಗಳಿಂದ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಜೋತೆಗೆ ಸಮಾಜದ ಎಲ್ಲಾ ಸಮುದಾಯಗಳವ-ರಿಗಾಗಿ ಮಂತ್ರಾಲಯ ಪಾದಯಾತ್ರೆ. ಸೇರಿದಂತೆ ಅನೇಕ ಧಾರ್ಮಿಕ ,ಸ ವ ಾ ಾ ಜಿ ಕ ,ಶೈ ೈ ಕ್ಷ ಣಿ ಕ ವಾ ಾ ದ ಅನೇಕ ಕಾರ್ಯಕ್ರಮಗಳನ್ನು .ಆಯೋಜಿಸಿಕೊಂಡು ಬರುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 2025-26 ನೇ ಸಾಲಿನ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಶೇ. 70 ಹಾಗೂ ಅದಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದ, ಪದವಿ ,ಸ್ನಾತಕೋತ್ತರ ಪದವಿ ಅಂತಿಮ ಪರೀಕ್ಷೆಯಲ್ಲಿ ಉತ್ತಮ ಹೆಚ್ಚಿನ ಅಂಕಗಳನ್ನು ಪಡೆದು ಉತ್ತೀರ್ಣರಾದ ಮಾನ್ವಿ ತಾಲೂಕಿನ 65 ಕ್ಕೂ ಹೆಚ್ಚು ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಶ್ರೀ ವಾಸವಿ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಮಯೂರಿ ನೃತ್ಯ ಕಲಾ ತಂಡದ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ಗಮನ ಸೇಳೆಯಿತು.

ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್. ಮುತ್ತುರಾಜ್ ಶೆಟ್ಟಿ , ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ್.ಡಿ. ತಾಲೂಕು ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರಾದ ರಾಜಾ ಸುಭಾಷಚಂದ್ರನಾಯಕ. ಮಾತನಾಡಿದರು.

ಕಾರ್ಯದರ್ಶಿ.ಬಿ. ಈರಣ್ಣ, ಆರ್. ದ್ವಾರಕನಾಥ್, ಡಿ.ರಾಘವೇಂದ್ರ, ಆರ್. ಪುರುಷೋತ್ತಮ, ಆರ್. ರಾಘವೇಂದ್ರ, ಬಿ.ಪವನ್. ವಿ. ಬಸವರಾಜ್ ,ಕುಮಾರ್, ವಾಸವಿ ಮಹಿಳಾ ಮಂಡಳಿ ತಾ. ಅಧ್ಯಕ್ಷರಾದ ಮಂಚಾಲಿ ಶೋಭಾ ಹಾಗೂ ಜಿ .ಲಕ್ಷ್ಮೀ, ಆರ್.ಲಕ್ಷ್ಮೀ, ಡಿ.ರಾದ, ಬಿ.ವೇದ ಸೇ-ರಿದಂತೆ ತಾಲೂಕಿನ 5ನೂರಕ್ಕೂ ಹೆಚ್ಚು ಆರ್ಯವೈಶ್ಯ ಸಮುದಾಯದವರು ಭಾಗವಹಿಸಿದರು.

1-ಮಾನ್ವಿ-3:

ಮಾನ್ವಿ: ಪಟ್ಟಣದ ಶ್ರೀ ವಾಸವಿ ಕಲ್ಯಾಣ ಮಂಟಪದಲ್ಲಿ ಶ್ರೀ ನಗರೇಶ್ವರ ಆರ್ಯವೈಶ್ಯಸಂಘದವತಿಯಿಂದನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತಾರಾಧ್ಯ ಶಿವಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸಿದರು.

ಈ ಒಂದು ವಿಷಯಕ್ಕೆಸಂಬಂಧಿಸಿದಂತೆ ಉತ್ತಮವಾದ ಒಂದು ಪತ್ರಿಕಾ ಶೈಲಿಯ ನೂತನ ಟೈಟಲ್ ನಿರ್ಮಾಣದೊಂದಿಗೆ ಉತ್ತಮವಾಗಿ ಸುದ್ದಿಯನ್ನು ಸಿದ್ಧಪಡಿಸಿಕೊಡಿ.. ವಿಷಯಕ್ಕೆ ಇನ್ನು ಸ್ವಲ್ಪ ಹೊಸ ವಿಚಾರಗಳು ಅವಶ್ಯಕತೆ ಎನ್ನಿಸಿದಲ್ಲಿ ಸೇರಿಸಿ... ಮತ್ತು ಅವಶ್ಯಕತೆ ಎನ್ನುವ ವಿಷಯಗಳನ್ನು ತೆಗೆಯಿರಿ... ಉಪಸ್ಥಿತಿಯ ಹೆಸರುಗಳನ್ನು ತೆಗಿಯದಿರಿ.. ಪ್ರಜಾವಾಣಿ ಶೈಲಿಯಲ್ಲಿ ಇರಲಿ..

## ಶಾಲಾ ಪ್ರಾರಂಭೋತ್ಸವ : ಮಕ್ಕಳಿಗೆ ಸಿಹಿ ತಿನಿಸು ಹೂವು ನೀಡಿ ಸ್ವಾಗತ

ರಾಯಚೂರು: ಶಾಲಾ ಪ್ರಾರಂಭೋತ್ಸವದ ಅಂಗವಾಗಿ ನಗರದ ಶ್ರೀ ರಾಮನಗರ ಕ್ಯಾಂಪ್‌ನ ಸರ್ಕಾರಿ ಕಿರಿಯ ಪ್ರಾಥ-ಮಿಕ ಶಾಲೆಯಲ್ಲಿ ಮಕ್ಕಳಿಗೆ ಆತ್ಮೀಯ ಸ್ವಾಗತ ಕೋರಲಾಯಿತು.

ಶಾಲೆಯ ಮುಖ್ಯ ಶಿಕ್ಷಕಿ ಲಲಿತಾ ಹಾಗೂ ಸಹ ಶಿಕ್ಷಕ ಮಹಾಂತೇಶ ಬಿರಾದಾರ ಅವರು ಶಾಲೆಗೆ ಆಗಮಿಸಿದ ಮಕ್ಕಳಿಗೆ ಬಾದೂಷಾ, ಚಾಕಲೇಟ್ ಹಾಗೂ ಹೂವುಗಳನ್ನು ನೀಡಿ ಸ್ವಾಗತಿಸಿದರು.

ಏಪ್ರಿಲ್ ಮತ್ತು ಮೇ ತಿಂಗಳ ಬೇಸಿಗೆ ರಜೆಯ ಬಳಿಕ ಶಾಲೆಗಳು ಶಿಕ್ಷಣ ಇಲಾಖೆಯ ಮಾರ್ಗಸೂಚಿಯಂತೆ ಹಾಗೂ ಪ್ರತಿ ವರ್ಷದ ಸಂಪ್ರದಾಯದಂತೆ ಪುನರಾರಂಭಗೊಂಡಿವೆ. ಶಾಲಾ ಪ್ರಾರಂಭೋತ್ಸವದ ಸಿದ್ಧತೆಯ ಅಂಗವಾಗಿ ಮೇ 29 ಮತ್ತು 30ರಂದು ಶಾಲಾ ಆವರಣವನ್ನು ಸ್ವಚ್ಛಗೊಳಿಸಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.

ಇದೇ ಸಂದರ್ಭದಲ್ಲಿ ಶಿಕ್ಷಣ ಇಲಾಖೆಯಿಂದ ಸರಬರಾಜು ಮಾಡಲಾದ ಪಠ್ಯಪುಸ್ತಕಗಳನ್ನು ಶಾಲೆಗೆ

ಆಗಮಿಸಿದ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಮಧ್ಯಾಹ್ನದ ಬಿಸಿಯೂಟದಲ್ಲಿ ಸಿಹಿಯೂಟ, ಅನ್ನ ಮತ್ತು ಸಾಂಬಾರನ್ನು ತಯಾರಿಸಿ ವಿದ್ಯಾರ್ಥಿಗಳಿಗೆ ಬಡಿಸಲಾಯಿತು.



ಶಾಲಾ ಆರಂಭದ ಮೊದಲ ದಿನವೇ ವಿದ್ಯಾರ್ಥಿಗಳು ಉತ್ಸಾಹದಿಂದ ಶಾಲೆಗೆ ಆಗಮಿಸಿದ್ದು, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗವು ಅವರನ್ನು ಆತ್ಮೀಯವಾಗಿ ಬರಮಾಡಿ ಕೊಂಡರು.

## ರಾಯಚೂರು ಗ್ರಾಮೀಣ ಕ್ಷೇತ್ರಕ್ಕೆ ಸಚಿವ ಸ್ಥಾನ ನೀಡಿ : ಬಸವನಗೌಡ ದದ್ದಲ್‌ಗೆ ಮಂತ್ರಿ ಪಟ್ಟ ಕೊಡಿ ಎಂದು ಒತ್ತಾಯಿಸಿದ ಕಾಂಗ್ರೆಸ್ ಮುಖಂಡ ಕೆ.ಷಣ್ಮುಖಪ್ಪ



ಮಾನ್ವಿ : ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಆದ್ಯತೆ ನೀಡುವ ಉದ್ದೇಶದಿಂದ ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಹಿರಿಯ ನಾಯಕ, ವಾಲ್ಮೀಕಿ ಸಮುದಾಯದ ಪ್ರಮುಖ ಮುಖಂಡ ಬಸವನಗೌಡ ದದ್ದಲ್ ಅವ-ರಿಗೆ ಸಚಿವ ಸ್ಥಾನ ನೀಡಬೇಕು ಎಂದು ರಾಯಚೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಕುರ್ಡಿ ಹೋಬಳಿ ಕಾಂಗ್ರೆಸ್ ಹಿರಿಯ ಮುಖಂಡ ಕೆ.ಷಣ್ಮುಖಪ್ಪ ವಲ್ಕಂದಿನ್ನಿ ಒತ್ತಾಯಿಸಿದ್ದಾರೆ. ಮಾನ್ವಿ ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಯಚೂರು ಗ್ರಾಮೀಣ ಕ್ಷೇತ್ರದಲ್ಲಿ ಬಸವನಗೌಡ ದದ್ದಲ್ ಅವರು ಎರಡು ಬಾರಿ ಶಾಸಕರಾಗಿ ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಪ್ರಸ್ತುತ ಶ್ರೀವಾಲ್ಮೀಕಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷರಾಗಿ ಸಮುದಾಯದ ಏಳಿಗೆಗೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಹೇಳಿದರು.

"ವಾಲ್ಮೀಕಿ ಸಮುದಾಯದ ರಾಜ್ಯಮಟ್ಟದ ಪ್ರಮುಖ ನಾಯಕರಾಗಿ ಗುರುತಿಸಿಕೊಂಡಿರುವ ದದ್ದಲ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೇತೃತ್ವದ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನ ನೀಡಬೇಕು. ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿಗೆ ಅವರ ಅನುಭವ ಮತ್ತು ಆಡಳಿತ ಸಾಮರ್ಥ್ಯ ಬಳಕೆಯಾಗಲಿದೆ" ಎಂದು ಕೆ.ಷಣ್ಮುಖಪ್ಪ ಮನವಿ ಮಾಡಿದರು.ರಾಯಚೂರು ಗ್ರಾಮೀಣ ಕ್ಷೇತ್ರವು ಕೃಷಿ ಆಧಾರಿತ ಪ್ರದೇಶವಾಗಿದ್ದು, ನೀರಾವರಿ, ಶಿಕ್ಷಣ, ಆರೋಗ್ಯ ಮತ್ತು ಕೈಗಾರಿಕಾ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಅಗತ್ಯವಿದೆ. ಬಸವನಗೌಡ ದದ್ದಲ್ ಅವರಿಗೆ ಸಚಿವ ಸ್ಥಾನ ನೀಡಿದರೆ ಈ ಭಾಗದ ಬಹುದಿನದ ಬೇಡಿಕೆಗಳು ಈಡೇರಲಿವೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ವಿಶ್ವನಾಥ ರೆಡ್ಡಿ, ಪ್ರವೀಣಕುಮಾರ, ಮನೋಜಗೌಡ ಕುರ್ಡಿ, ಈರಣ್ಣನಾಯಕ, ಹರಿಶ್ಚಂದ್ರ ಗೋರ್ಕಲ್, ಜಂಬಣ್ಣ, ವಿರುಪನಗೌಡ, ದೇವರಾಜನಾಯಕ, ಕೃಷ್ಣನಾಯಕ ರಾಜೋಳ್ಳಿ, ಹನುಮೇಶ ಉಪಸ್ಥಿತ-ರಿದ್ದರು.

## ಸಂಪುಟ ವಿಸ್ತರಣೆಯಲ್ಲಿ ಯಾದವ ಸಮಾಜಕ್ಕೆ ಮಂತ್ರಿ ಸ್ಥಾನ: ಮುದಗಲ್ ಹಿರಿಯರ ಒತ್ತಾಯ

ಮುದಗಲ್ : ರಾಜ್ಯ ಸಂಪುಟದಲ್ಲಿ ಯಾದವ ಸಮಾಜ-ಕ್ಕೆ ಪ್ರಾತಿನಿಧ್ಯ ನೀಡಬೇಕು ಎಂದು ಮುದಗಲ್ ತಾಲೂಕು ಯಾದವ ಸಮಾಜದ ಹಿರಿಯ ಮುಖಂಡ ಕರಿಯಪ್ಪ ಯಾದವ ಒತ್ತಾಯಿಸಿದ್ದಾರೆ.

ಮಂಗಳವಾರ ಮುದಗಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾದವ ಸಮಾಜವು ಕಾಂಗ್ರೆಸ್ ಪಕ್ಷದ ಸಿದ್ಧಾಂತಕ್ಕೆ ಬದ್ಧವಾಗಿ ದಶಕಗಳಿಂದ ಬೆಂಬಲ ನೀಡುತ್ತಿದೆ. ಆದರೂ ಸಂಪುಟದಲ್ಲಿ ಸಮಾಜಕ್ಕೆ ಸಚಿವ ಸ್ಥಾನ ಸಿಕ್ಕಿಲ್ಲ. ಇದರಿಂದ ಸಮಾಜದ ಕಾರ್ಯಕರ್ತರಲ್ಲಿ ಅಸಮಾಧಾನವಿದೆ ಎಂದು ಹೇಳಿದರು.

ಯಾದವ ಸಮಾಜದ ರಾಜ್ಯಾಧ್ಯಕ್ಷರಾಗಿರುವ ವಿಧಾನ ಪರಿಷತ್ ಸದಸ್ಯ ಡಿ.ಬಿ. ಶ್ರೀನಿವಾಸ್ ಅವರಿಗೆ ಸಚಿವ ಸ್ಥಾನ ನೀಡುವಂತೆ ಕರಿಯಪ್ಪ ಯಾದವ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದರು. ಪ್ರವರ್ಗ-1 ಜಾತಿಗಳ ಒಕ್ಕೂಟಗಳ ರಾಜ್ಯಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿರುವ ಡಿ.ಬಿ. ಶ್ರೀನಿವಾಸ್ ಅವರು ಹಿಂದುಳಿದ ವರ್ಗಗಳ ಸಮಸ್ಯೆಗಳ ಬಗ್ಗೆ ಆಳವಾದ ಅರಿವು ಹೊಂದಿದ್ದಾರೆ. ಅವರಿಗೆ ಅವಕಾಶ ನೀಡಿದರೆ ಸಮಾಜದ ಜತೆಗೆ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪೂರಕವಾಗಲಿದೆ ಎಂದರು.

## ಶಾಸಕ ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಲು ಆಗ್ರಹಿಸಿ ಪ್ರತಿಭಟನೆ




ಸಿಂಧನೂರು: ಹಿರಿಯ ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಮಂಗಳವಾರ ಸಿಂಧನೂರಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಹಂಪನಗೌಡ ಬಾದರ್ಲಿ ಅಭಿಮಾನಿ ಬಳಗದಿಂದ ಬೃಹತ್ ಪ್ರತಿಭಟನೆ ನಡೆಯಿತು.

ಶಾಸಕರ ಕಾರ್ಯಾಲಯದಿಂದ ಆರಂಭಗೊಂಡ ಪ್ರತಿಭಟನಾ ಮೆರವಣಿಗೆ ಮಹಾತ್ಮ ಗಾಂಧಿ ವೃತ್ತದವರೆಗೆ ಸಾಗಿತು. ಪ್ರತಿಭಟನಾ ಮೆರವಣಿಗೆಯುದ್ದಕ್ಕೂ ಹಂಪನಗೌಡ ಬಾದರ್ಲಿಗೆ ಸಚಿವ ಸ್ಥಾನ ನೀಡಬೇಕೆಂದು ಘೋಷಣೆ ಕೂಗಿದರು. ಎಪಿಎಂಸಿ ರಾಜ್ಯ ಉಪಾಧ್ಯಕ್ಷ ರಾಜಶೇಖರ ಪಾಟೀಲ್ ಮಾತನಾಡಿ, ಹಂಪನಗೌಡ ಬಾದರ್ಲಿ ಅವರು ಸತತ 40 ವರ್ಷದಿಂದ ರಾಜಕಾರಣದಲ್ಲಿ ಇದ್ದಾರೆ. ಸಿಂಧನೂರು ಜನತೆಯ ಆಶೀರ್ವಾದದಿಂದ 5 ಬಾರಿ ಶಾಸಕರಾಗಿದ್ದಾರೆ ಕಾರ್ಯನಿರ್ವಹಿಸಿದ್ದಾರೆ. ಹಿಂದಿನ ಅವಧಿಯಲ್ಲಿಯೇ ಅವ-ರಿಗೆ ಸಚಿವ ಸ್ಥಾನ ಸಿಗಬೇಕಿತ್ತು ಈ ಬಾರಿಯಾದರು ಸಚಿವ ಸಂಪುಟದಲ್ಲಿ ಅವಕಾಶ ನೀಡುವ ಮೂಲಕ ರಾಯಚೂರು ಜಿಲ್ಲೆಗೆ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಎಂ.ಲಿಂಗಪ್ಪ, ಖಾಜಿಮಲಿಕ್ ವಕೀಲ,ವೈ.ಅನಿಲ್ ಕುಮಾರ್,ಮಹ್ಮದ್ ಅಲ್ತಾಫ್ ಸಾಹುಕಾರ, ಶರಣಪ್ಪ ರೆಡ್ಡರ್, ವೆಂಕೋಬ ಬಾವಿಕಟ್ಟಿ ಕಲ್ಲೂರು, ಶಫುವುಲ್ಲಾ ಖಾನ್, ಆರ್ .ಸಿ.ಪಾಟೀಲ್, ಸಂಜಯ್ ಪಾಟೀಲ್, ಶಫುವುಲ್ಲಾ ಖಾನ್, ಪ್ರಭುರಾಜ್, ಛತ್ರಪ್ಪ ಕುರಕುಂದಿ, ಶರಣಪ್ಪ ಉಪ್ಪಲದೊಡ್ಡಿ, ಶೇಖರಪ್ಪ ಗಿಣಿವಾರ, ವೆಂಕಟೇಶ ದತ್ತುರಾವ್, ಮಲ್ಲನಗೌಡ ಮಾವಿನಮಡುಗು, ರಾಮನಗೌಡ ಮಲ್ಕಾಪುರ, ಹಂಪಯ್ಯಸ್ವಾಮಿ ರಾವಿಹಾಳ, ಅಮರೇಶ ಮಾಡಶಿರವಾರ, ಸಿದ್ದನಗೌಡ ವಿರುಪಾಪೂರು, ವೈ.ನರೇಂದ್ರನಾಥ, ಮರಿಯಪ್ಪ ಜಾಲಿಹಾಳ, ಅಶೋಕ ಉಮಲೂಟಿ, ಬಸವರಾಜ ಸಾಹುಕಾರ್ ಕುರಕುಂದ, ಅಶೋಕಗೌಡ ಜಿ.ಜೆ., ಎಂ.ಡಿ.ನದೀಮುಲ್ಲಾ, ರಾಮಣ್ಣ ಜವಳಗೇರಾ, ಆರ್.ತಿಮ್ಮಯ್ಯ ನಾಯಕ, ಎನ್.ವಿ.ಸತ್ಯನಾರಾಯಣ, ಎಂ.ಸಿ.ಅಂಕಯ್ಯ, ಪಂಪನಗೌಡ ತಾವರಗೇರಾ, ವೆಂಕಟರೆಡ್ಡಿ ಹುಡಾ, ಅಸ್ಲಾಂ ಸೇರಿದಂತೆ ನೂರಾರು ಜನ ಕಾರ್ಯಕರ್ತರು ಇದ್ದರು.

## ಮಾನ್ವಿಯಲ್ಲಿ ಪತ್ರಿಕಾ ಭವನಕ್ಕೆ ಸಿಎ ಸೈಟ್ ಮಂಜೂರು ಕೋರಿ ಮನವಿ



ಮಾನ್ವಿ:ನಗರದಲ್ಲಿ ಪತ್ರಕರ್ತರ ಕರ್ತವ್ಯ ನಿರ್ವಹಣೆಗೆ ಮೂಲಭೂತ ಸೌಕರ್ಯ ಕಲ್ಪಿಸುವ ಉದ್ದೇಶದಿಂದ ಪತ್ರಿಕಾ ಭವನ ನಿರ್ಮಾಣಕ್ಕೆ ನಗರಯೋಜನಾ ಪ್ರಾಧಿಕಾರದ ಸಿಎ ಸೈಟ್ ಮಂಜೂರು ಮಾಡುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮಾನ್ವಿ ತಾಲೂಕು ಘಟಕ ಒತ್ತಾಯಿಸಿದೆ.

ಪಟ್ಟಣದ ನಗರಯೋಜನಾ ಪ್ರಾಧಿಕಾರದ ಕಚೇರಿಗೆ ತೆರಳಿದ ಸಂಘದ ಪದಾಧಿಕಾರಿಗಳು ಅಧ್ಯಕ್ಷರಿಗೆ ಮನವಿ ಸಲ್ಲಿಸಿದರು. ಕಚೇರಿ ಸಿಬ್ಬಂದಿ ಗುಲಾಂ ಗೌಸ್ ಮೂಲಕ ಸಲ್ಲಿಸಿದ ಮನವಿಯಲ್ಲಿ, ಸುದ್ದಿಗೋಷ್ಠಿ, ಸಾರ್ವಜನಿಕ ಸಮಸ್ಯೆಗಳ ಚರ್ಚೆ ಹಾಗೂ ಪತ್ರಿಕಾ ಕಾರ್ಯಗಳಿಗೆ ಪ್ರತ್ಯೇಕ ಸ್ಥಳದ ಅಗತ್ಯವಿದೆ ಎಂದು ತಾಲೂಕು ಅಧ್ಯಕ್ಷ ಆಶೋಕ ತಡಕಲ್ ತಿಳಿಸಿದರು.

ಮಾನ್ವಿ ತಾಲೂಕು ದಿನದಿಂದ ದಿನಕ್ಕೆ ವಿಸ್ತರಿಸುತ್ತಿದೆ. ಸುದ್ದಿ ಸಂಗ್ರಹಣೆ, ಮಾಧ್ಯಮ ಸಂವಾದಕ್ಕೆ ಸೂಕ್ತ ಸ್ಥಳವಿಲ್ಲದಿರುವುದರಿಂದ ಪತ್ರಕರ್ತರು ತೊಂದರೆ ಅನುಭವಿಸುತ್ತಿದ್ದಾರೆ. ಪಟ್ಟಣದ ವಿವಿಧ ಅನುಮೋದಿತ ಬಡಾವಣೆಗಳಲ್ಲಿ ಖಾಲಿ ಇರುವ ಸಿಎ ಸೈಟ್‌ಗಳನ್ನು ಗುರುತಿಸಿ ಪತ್ರಿಕಾ ಭವನಕ್ಕೆ ಮಂಜೂರು ಮಾಡಿದರೆ ಮಾಧ್ಯಮ ಕ್ಷೇತ್ರಕ್ಕೆ ದೊಡ್ಡ ಅನುಕೂಲವಾಗಲಿದೆ ಎಂದು ಅವರು ಹೇಳಿದರು.

ಪತ್ರಿಕಾ ಭವನದಲ್ಲಿ ಪತ್ರಕರ್ತರ ಸಭಾಂಗಣ, ಗ್ರಂಥಾಲಯ, ಇ-ಲೈಬ್ರರಿ ಸೌಲಭ್ಯ ಕಲ್ಪಿಸುವ ಯೋಜನೆ ಇದೆ. ಇದು ಸಾರ್ವಜನಿಕರಿಗೂ ಮಾಹಿತಿ ಕೇಂದ್ರವಾಗಿ ಬಳಕೆಯಾಗಲಿದೆ ಎಂದು ಸಂಘದ ಪದಾಧಿಕಾರಿಗಳು ಅಭಿಪ್ರಾಯಪಟ್ಟರು.

ಮನವಿ ಸಲ್ಲಿಸಿದಾಗ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ತಾಯಪ್ಪ ಬಿ.ಹೊಸೂರು, ಕಾರ್ಯದರ್ಶಿ ರವಿ ಅಲ್ದಾಳ್ ಸೇರಿದಂತೆ ವಿಜಯಕುಮಾರ, ಗಯಾಸ್, ನವೀನ್‌ಕುಮಾರ, ರಾಜಶೇಖರ, ಶ್ರೀನಿವಾಸರೆಡ್ಡಿ, ಸಿದ್ದಾರಾಮಯ್ಯಸ್ವಾಮಿ, ದೇವರಾಜ, ಹುಸೇನಪ್ಪ ನಂದಿಹಾಳ್, ರಾಜಶೇಖರ್‌ಸ್ವಾಮಿ, ರಾಜಶೇಖರ್, ನಾಗರಾಜ ತಡಕಲ್, ಬಸವರಾಜ ತಡಕಲ್, ಮೈನುದಿನ್, ಚಂದ್ರಶೇಖರ್, ಶಿವು ಸಜ್ಜನ್, ಜಿತೇಂದ್ರಸ್ವಾಮಿ ಉಪಸ್ಥಿತರಿದ್ದರು.

## ರಾಯಚೂರು ಜಿಲ್ಲೆಗೆ 2 ಸಚಿವ ಸ್ಥಾನ ನೀಡಿ: ಹಂಪಯ್ಯನಾಯಕ, ಬೋಸರಾಜು ಅವರಿಗೆ ಸಚಿವ ಸ್ಥಾನಕ್ಕೆ ಶೇಕ್ ಸತ್ತಾರ್ ಬಂಗ್ಲೆವಾಲೆ ಒತ್ತಾಯ



ಮಾನ್ವಿ : ಜಿಲ್ಲೆಯ ಅಭಿವೃದ್ಧಿ ಹಿತದೃಷ್ಟಿಯಿಂದ ಜಿಲ್ಲೆಗೆ ಕನಿಷ್ಠ 2 ಸಚಿವ ಸ್ಥಾನ ನೀಡಬೇಕು. ಮಾನ್ವಿ ಶಾಸಕ ಹಂಪಯ್ಯನಾಯಕ ಹಾಗೂ ಮಾಜಿ ಸಚಿವ ಎನ್.ಎಸ್.ಬೋಸರಾಜು ಅವರನ್ನು ಸಂಪುಟಕ್ಕೆ ಸೇರಿಸಿ ಜಿಲ್ಲಾ ಉಸ್ತುವಾರಿ ನೀಡಬೇಕು ಎಂದು ಕಾಂಗ್ರೆಸ್ ಯುವ ಮುಖಂಡ ಶೇಕ್ ಸತ್ತಾರ್ ಬಂಗ್ಲೆವಾಲೆ ಒತ್ತಾಯಿಸಿದರು.

ಭಾನುವಾರ ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಂಪಯ್ಯನಾಯಕ ಅವರು ವಾಲ್ಮೀಕಿ ಸಮುದಾಯದ ಅತ್ಯಂತ ಹಿರಿಯ ಶಾಸಕರಾಗಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಶಾಸಕರಾಗಿ ಸತ ಮೂರು ಬಾರಿ ಆಯ್ಕೆಯಾಗಿ ಈ ಭಾಗದ ನೀರಾವರಿ, ರಸ್ತೆ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅವರ ಅನುಭವ ಹಾಗೂ ಸಮುದಾಯದ ಪ್ರತಿನಿಧಿತ್ವವನ್ನು ಗಮನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೇತೃತ್ವದ ಸಂಪುಟದಲ್ಲಿ ಪ್ರಮುಖ ಖಾತೆ ನೀಡಬೇಕು ಎಂದರು.

ಎನ್.ಎಸ್.ಬೋಸರಾಜು ಅವರು ಸಿದ್ದರಾಮಯ್ಯ ಸಂಪುಟದಲ್ಲಿ ಸಣ್ಣ ನೀರಾವರಿ ಹಾಗೂ ವಿಜ್ಞಾನ-ತಂತ್ರಜ್ಞಾನ ಸಚಿವರಾಗಿ ಕಾರ್ಯನಿರ್ವಹಿಸಿದ್ದ ಅವಧಿಯಲ್ಲಿ ರಾಯಚೂರು ಜಿಲ್ಲೆಗೆ ಸುಮಾರು 2 ಸಾವಿರ ಕೋಟಿ ರೂ. ಅನುದಾನ ತಂದು ಸಣ್ಣ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಿದ್ದರು. ಪಕ್ಷ ಸಂಘಟನೆಯಲ್ಲಿ ಪರಿಣತರಾಗಿರುವ ಅವರು ಕೇರಳ ಮತ್ತು ತೆಲಂಗಾಣ ವಿಧಾನಸಭಾ ಚುನಾವಣೆಯ ಉಸ್ತುವಾರಿ ವಹಿಸಿಕೊಂಡು ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಕಾರಣರಾಗಿದ್ದರು ಎಂದು ಬಂಗ್ಲೆವಾಲೆ ತಿಳಿಸಿದರು.

ರಾಯಚೂರು ಜಿಲ್ಲೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ವ್ಯಾಪ್ತಿಗೆ ಬರುತ್ತದೆ. 371(ಜೆ) ಅನುದಾನ ಸದುಪಯೋಗ, ತುಂಗಭದ್ರೆ ಮೇಲ್ದಂಡೆ ಯೋಜನೆ, ಕೃಷ್ಣಾ ನೀರಿನ ಹಂಚಿಕೆ ಸೇ-ರಿದಂತೆ ಹಲವು ಬಾಕಿ ಯೋಜನೆಗಳ ಅನುಷ್ಠಾನಕ್ಕೆ ಸಚಿವ ಸ್ಥಾನದ ಶಕ್ತಿ ಅಗತ್ಯವಿದೆ. ಹೀಗಾಗಿ ಜಿಲ್ಲೆಯ ಹಿತಕ್ಕಾಗಿ ಹಂಪಯ್ಯನಾಯಕ ಹಾಗೂ ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಿ ರಾಯಚೂರು ಜಿಲ್ಲಾ ಉಸ್ತುವಾ-ರಿಯನ್ನೂ ವಹಿಸಬೇಕು ಎಂದು ಕಾಂಗ್ರೆಸ್ ವರಿಷ್ಠರಿಗೆ ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಯುವ ಮುಖಂಡರಾದ ಬೀರಪ್ಪ ಬಲ್ಲಟಗಿ, ಅಬ್ಬು ಪಟೇಲ್, ಖದೀರ್ ನಾಯ್ಕ್, ಎಂ.ಡಿ.ಇಸ್ಮಾಯಿಲ್ ಮಾಡಗಿರಿ, ಕನಕಪ್ಪ ಯಾದವ್, ಶಿವು ಮಹಾಂತೇಶ್, ಎಸ್.ಎಂ.ಪಾಟೀಲ್, ಡಾ.ನವೀನ್ ಗೋರ್ಕಲ್, ಆಂಜನೇಯ್ಯ, ಹಾಜಿಸಾಬ್, ಈರಪ್ಪ ಕೊಟ್ನೆಕಲ್ ಉಪಸ್ಥಿತರಿದ್ದರು.

Editor:S.K.Wadeyar, #69 "VISPATHI", B,Block S.O.G. Colony Davanagere-577005,Karnataka.
Publisher:S.K.Wadeyar, #69 "VISPATHI", B,Block S.O.G. Colony Davanagere-577005,Karnataka.
Printer:S.K.Wadeyar, SUCHITHRA PRINTERs & PUBLISHERs # 69 "VISPATHI",B,Block S.O.G.Colony Davanagere-577005,Karnataka
Owner:S.K.Wadeyar, #69 "VISPATHI", B,Block S.O.G.Colony, Davanagere-577005,Karnataka